ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬೆಳಿಗ್ಗೆ ನನಗೆ ಮಾತನಾಡಲಿಕ್ಕೆ ಅವಕಾಶವಿತ್ತು. ಆದರೆ ನನ್ನ ಕ್ಷೇತ್ರದಲ್ಲಿ ಒಂದು ಮಗು ಹಾರ್ಟ್ ಅಟ್ಯಾಕ್ ಆಗಿ ಮರಣ ಹೊಂದಿದ್ದು ಅದರ ಶವವನ್ನು ಕಳುಹಿಸಿಕೊಡಬೇಕಾಗಿ ಬಂದಿದ್ದರಿಂದ ಬೆಳಿಗ್ಗೆ ನನಗೆ ಮಾತನಾಡಲಿಕ್ಕೆ ಸಾಧ್ಯವಾಗಲಿಲ್ಲ. ಈಗ ತಾವು ಮಾತನಾಡಿದ್ದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಸರ್ಕಾರದ ಎಲ್ಲಾ ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದೇನೆಂದು ಭಾವಿಸಿ, ಆಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಇನ್ನೊಂದು ಸಾರಿ ಅವರ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣ ಅವರು 5 ನಿಮಿಷ, ಕಾಲ ಮಾತನಾಡಿ ನಂತರ ಮಾನ್ಯ ನಾರಾಯಣಸ್ವಾಮಿಯವರು 5 ನಿಮಿಷಗಳ ಕಾಲ ಮಾತನಾಡಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ಪ್ರಪ್ರಥಮವಾಗಿ ವಂದಿಸಿ ಈಗ ಅನೇಕ ವಿಚಾರಗಳನ್ನು ಹಿರಿಯ ಸದಸ್ಯರು, ಸ್ನೇಹಿತರು ಹೇಳಿದ್ದಾರೆ...

ಅಧ್ಯಕ್ಷರು : ಹೊಸ ವಿಷಯಗಳ ಬಗ್ಗೆ ಮಾತನಾಡಿ, ರಿಪೀಟ್ ಮಾಡಬೇಡಿ. ಬೇರೆ ಸದಸ್ಯರು ಹೇಳಿದ ವಿಷಯಗಳ್ನು ರಿಪೀಟ್ ಮಾಡಬೇಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಹೊಸ ವಿಷಯಗಳನ್ನು ಹೇಳುತ್ತೇನೆ. ಹಲವಾರು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳ್ನನು ಸದನದಲ್ಲಿ ಮಂಡಿಸಿದ್ದಾರೆ. ನಾನು ನನ್ನ ಅನಿಸಿಕೆ ಪ್ರಕಾರ ಪ್ರಪ್ರಥವಾಗಿ ಈ ಬೆಳೆ ವಿಮೆ ಬಗ್ಗೆ ಮಾತನಾಡಬಯಸುತ್ತೇನೆ.

7) ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118 ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 16ನೇ ಜನವರಿ 2004ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತದೆಂದು ತಿಳಿಸಿರುತ್ತಾರೆ:

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2004
2. ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ, 2004

ಮಾನ್ಯ ಸಂಗಣ್ಣನವರೇ ಮುಂದುವರೆಸಿ, ಬೇಗ ಮುಗಿಸಿ.

8) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿದ ಚರ್ಚೆ

† **ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಇವತ್ತು ಬೆಳೆ ವಿಮೆ ನಿಯಮಗಳಲ್ಲಿ ಬದಲಾವಣೆ ಆಗಬೇಕೆನ್ನುವುದು ನನ್ನ ವಾದ. ಇವತ್ತು ಭಾರತ ದೇಶ ಕೃಷಿ ಪ್ರಧಾನವಾದ ದೇಶವೆಂದು ಒಂದು ಕಡೆ ನಾವು ಕರೆಯುತ್ತಿದ್ದೇವೆ. ಮತ್ತು ರೈತ ಈ ರಾಷ್ಟ್ರದ ಬೆನ್ನೆಲುಬು ಎಂದು ಕೂಡ ಒಂದು ಹೆಗ್ಗಳಿಕೆಯ ಮಾತನ್ನು ನಾವು ಇವತ್ತು ಹೇಳುತ್ತಿದ್ದೇವೆ. ಆದರೆ ರೈತನಿಗೆ ಸಿಗಬೇಕಾದಂಥ ಮೌಲ್ಯಗಳು ಇವತ್ತು ಸಿಗುತ್ತಿಲ್ಲ. ಇವತ್ತು ವಿಮೆ ಬಗ್ಗೆ ನಾನು ಮಾತನಾಡುವುದಾದರೆ ಎಂತಹ ಒಂದು ವಿಪರ್ಯಾಸವನ್ನು ಇದರಲ್ಲಿ ನೋಡುತ್ತೇವೆ ಎಂದರೆ ಈಗ ಈ ಬೆಳೆವಿಮೆಯನ್ನು ದೊಡ್ಡ ದೊಡ್ಡ ಶ್ರೀಮಂತರುಗಳ ಮನೆಯಲ್ಲಿ ದೊಡ್ಡ ಅಲ್ಸೇಶಿಯನ್ ನಾಯಿಗಳನ್ನೂ ಸಾಕುತ್ತಾರೆ ಮತ್ತು ಸ್ಥಿರ

ಮತ್ತು ಜಂಗಮ ಆಸ್ತಿ ಅಂತ ಹೇಳಿ ನಾವು ಯಾವುದನ್ನು ಕರೆಯುತ್ತೇವೆ ಅದಕ್ಕೆಲ್ಲಾ ಕೂಡ ವಿಮೆ ಇಳಿಸಲಿಕ್ಕೆ ಅವಕಾಶ ಇದೆ. ಆದರೆ ಇವತ್ತು ರೈತ ತನ್ನ ಜಮೀನಿನಲ್ಲಿ ಏನು ಬೆಳೆಯುತ್ತಾನೆ. ಅದಕ್ಕೆ ಅವನಿಗೆ ಅನುಕೂಲತೆ ಸಿಗುತ್ತಿಲ್ಲ. ಇವತ್ತು ರೈತನು ಹವಾಮಾನಕ್ಕೆ ಅನುಗುಣವಾಗಿ ಮತ್ತು ಅಲ್ಲಿ ಬೀಳತಕ್ಕಂಥ ಮಳೆಯ ಪ್ರಮಾಣದ ಮೇರೆಗೆ ಬೆಳೆಗಳನ್ನು ಆತ ಬಿತ್ತನೆ ಮಾಡುತ್ತಾನೆ. ಆದರೆ ಬೆಳೆವಿಮೆ ಯೋಜನೆಯಲ್ಲಿ ಇರತಕ್ಕಂಥಾದ್ದು ಏನೆಂದರೆ ಇವತ್ತು ಸರ್ಕಾರದವರು ಘೋಷಣೆ ಮಾಡಿದ್ದಾರೆ. ಇಂತಹ ತಾಲ್ಲೂಕುಗಳಲ್ಲಿ ಇಂತಹ ಬೆಳೆಗಳಿಗೆ ವಿಮೆಯೋಜನೆಯನ್ನು ಒದಗಿಸುತ್ತೇವೆ ಮತ್ತು ಈ ವಿಮೆ ಯೋಜನೆಯಡಿಯಲ್ಲಿ ರೈತ ಪ್ರೀಮಿಯಂ ತುಂಬಬೇಕೆಂದು ಇವತ್ತು ಸರ್ಕಾರದವರು ಘೋಷಣೆಯನ್ನು ಮಾಡಿದ್ದಾರೆ. ಹೀಗಾಗಿ ರೈತ ಅನೇಕ ಬೆಳೆಗಳನ್ನು ಇವತ್ತು ಬೆಳೆಯತಕ್ಕಂಥ ಸಂದರ್ಭದಲ್ಲಿ ಅವನು ಆ ಬೆಳೆ ಕುಂಠಿತವಾದಂಥ ಸಂದರ್ಭದಲ್ಲಿ ಅವನಿಗೆ ಈ ಬೆಳೆವಿಮೆ ಯೋಜನೆಯ ಲಾಭ ತಟ್ಟುವುದಿಲ್ಲ. ಈ ಕಾರಣಕ್ಕೆ ನನ್ನ ಅನಿಸಿಕೆ ಪ್ರಕಾರ ಇವತ್ತು ಏನು ರೈತ ಹವಾಮಾನಕ್ಕೆ ಅನುಗುಣವಾಗಿ ಮತ್ತು ಅಲ್ಲಿ ಬೀಳತಕ್ಕಂಥ ಮಳೆಯ ಪ್ರಮಾಣದ ಮೇರೆಗೆ ಯಾವ ಬೆಳೆಯನ್ನು ಬೆಳೆಯುತ್ತಾನೆ ಆ ಎಲ್ಲಾ ಬೆಳೆಗಳಿಗೆ ಕೂಡ ಈ ವಿಮಾ ಯೋಜನೆಯ ಲಾಭವನ್ನು ತಲುಪಿಸತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಈ ಬೆಳೆವಿಮೆಯನ್ನು ಒಳಪಡಿಸತಕ್ಕಂಥ ವಿಧಾನದ ಬಗ್ಗೆ ಕೂಡ ನಾವು ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ನೀರಾವರಿ ಪ್ರದೇಶದಲ್ಲಿ ಬೆಳೆಯತಕ್ಕಂಥ ಬೆಳೆ ಮತ್ತು ಮಳೆಯಾಧಾರಿತ ಪ್ರದೇಶದಲ್ಲಿ ಬೆಳೆಯತಕ್ಕಂಥ ಬೆಳೆ ಬೇರೆಬೇರೆ ಇದೆ. ಇವರು ರ್‍ಯಾಂಡಮ್ ಆಗಿ ಕ್ರಾಪ್ ಕಟ್ಟಿಂಗ್‌ನ್ನು ಒಂದು ಪ್ರಾಯೋಗಿಕವಾಗಿ, ಅಂದರೆ ಏನು ಇವತ್ತು ಬೆಳೆ ಇಳುವರಿಯನ್ನು ಪ್ರಾಯೋಗಿಕವಾಗಿ ಇಟ್ಟುಕೊಂಡು ಮಾಡತಕ್ಕಂಥ ವಿಧಾನ ಇದೆ ಅದನ್ನು ವರ್ಗೀಕರಣ ಮಾಡಬೇಕೆಂಬುದು ನನ್ನ ವಾದ. ಏಕೆಂದರೆ ನೀರಾವರಿ ಪ್ರದೇಶಗಳಲ್ಲಿ ಅಲ್ಲಿ ಹೆಚ್ಚು ಇಳುವರಿಯನ್ನು ನಾವು ನೋಡುತ್ತೇವೆ. ಆದರೆ ಅದೇ ಒಳಪ್ರದೇಶದಲ್ಲಿ ಇಳುವರಿ ಕಡಿಮೆಯಾಗುತ್ತದೆ. ಇವತ್ತು ಹೋಬಳಿ ಮಟ್ಟ ಮತ್ತು ಪಂಚಾಯಿತಿ ಮಟ್ಟದಲ್ಲಿದ್ದುದನ್ನು ರ್‍ಯಾಂಡಮ್ ಆಗಿ ಪರಿಶೀಲನೆ ಮಾಡಿದಾಗ ಅಲ್ಲಿ ಒಣ ಪ್ರದೇಶದಲ್ಲಿ ಬೆಳೆದಂಥ ರೈತನಿಗೆ ತುಂಬಾ ಅನ್ಯಾಯವಾಗುತ್ತಿದೆ. ಆ ಕಾರಣಕ್ಕೆ ನನ್ನ ವಾದ ಏನೆಂದರೆ, ಯಾವುದೇ ಜಮೀನಾಗಲಿ ಸರ್ವೆ ನಂಬರ್‌ವೈಸ್ ಆಗಿ ಆದರ ಇಳುವರಿಯನ್ನು ಮಾತ್ರ ಪ್ರಧಾನವಾಗಿ ಪರಿಗಣಿಸಬೇಕು. ಮತ್ತು ಇವರು ಸರಾಸರಿ ಐದು ವರ್ಷದ ಇಳುವರಿಯ ಆಧಾರವನ್ನು ಇಟ್ಟುಕೊಳ್ಳುತ್ತಾರೆ. ಹೋಬಳಿ ಮಟ್ಟದಲ್ಲಿ ಒಂದೇ ತರನಾಗಿ ಮಾಡತಕ್ಕದ್ದು ಒಂದು. ಇನ್ನೊಂದು ಐದು ವರ್ಷದ ಇಳುವರಿ ಆಧಾರದ ಹಿನ್ನೆಲೆಯಲ್ಲಿ ಮಾಡುವಾಗ ನಾನು ಏನು ಕೇಳುತ್ತಿದ್ದೇನೆ ಎಂದರೆ ಐದು ವರ್ಷದ ಸರಾಸರಿ ಇಳುವರಿಯನ್ನು ತೆಗೆದುಕೊಂಡು ಅದರ ಇಂಡೆಮ್ನಿಟಿ ರಿಸ್ಕ್ 60 ಪರ್ಸೆಂಟ್‌ನ-ಕೆಳಗಡೆ ಬರತಕ್ಕಂಥಾದ್ದಕ್ಕೆ ಮಾತ್ರ ವಿಮೆಯನ್ನು ಒಳಪಡಿಸತಕ್ಕಂಥ ವ್ಯವಸ್ಥೆ ಸರ್ಕಾರದಲ್ಲಿ ಇದೆ. ಹಾಗಾಗಿ ಇದರಿಂದ ಐದು ವರ್ಷದಲ್ಲಿ ಒಂದು ಎಕರೆಗೆ ನಾಲ್ಕು ಕ್ವಿಂಟಾಲ್ ಬಂದಿರುತ್ತದೆ, ಒಂದು ವರ್ಷ ಹತ್ತು ಕ್ವಿಂಟಾಲ್ ಬಂದಿರುತ್ತದೆ, ಒಂದು ವರ್ಷ ಹನ್ನೆರಡು ಕ್ವಿಂಟಾಲ್ ಬಂದಿರುತ್ತದೆ. ಒಂದು ವರ್ಷ ಬರೇ ಎರಡು ಕ್ವಿಂಟಾಲ್ ಬಂದಿರುತ್ತದೆ. ಅದರಲ್ಲಿ ಶೇಕಡಾವಾರು ಐದು ವರ್ಷದ ಸರಾಸರಿಯಲ್ಲಿ ಕಡಿತ ಮಾಡುವಾಗ ಆ ಯೋಜನೆಯ ಲಾಭ ರೈತನಿಗೆ ತಟ್ಟುವುದೇ ಇಲ್ಲ. ಆ ಕಾರಣಕ್ಕಾಗಿ ರೈತ ನಾಯಕರು, ಕೃಷಿ ತಜ್ಞರು ಮತ್ತು ಆರ್ಥಿಕ ತಜ್ಞರು ಇದನ್ನು

ಪರ್ಯಾಲೋಚನೆ ಮಾಡುವಂಥ ಚಿಂತನೆಯನ್ನು ಮಾಡಬೇಕಾಗಿದೆ. ಹಾಗಾದಾಗ ಮಾತ್ರ ರೈತನಿಗೆ ಮಾತ್ರ ರೈತನಿಗೆ ಇವತ್ತು ಏನು ಆತ ನ್ಯಾಯಸಮ್ಮತವಾಗಿ ನಷ್ಟದಲ್ಲಿದ್ದಾನೆ, ಏನು ಬಂಡವಾಳವನ್ನು ಹೂಡಿ ಇವತ್ತು ಅವನು ಸಂಕಷ್ಟದಲ್ಲಿದ್ದಾನೆ. ಅವನಿಗೆ ನೆರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದೇ ತೆರನಾಗಿ ಈಗ ಬೇರೆಬೇರೆ ವಿಚಾರಗಳನ್ನು ನಾವು ಗಮನಿಸಿದಾಗ ಕಂತು ಕಟ್ಟುವುದೂ ಕೂಡ ಏನಾಗಿದೆ ಎಂದರೆ, ಬೆಳೆ ಹಾಕಿದ ತಕ್ಷಣ ಇವರು ಕಂತು ಕಟ್ಟತಕ್ಕಂಥ ಆದೇಶವನ್ನ ಮಾಡಿದ್ದಾರೆ. ಆದರೆ ಕೊನೆಯ ಪಕ್ಷ ಎರಡು ತಿಂಗಳಾದರೂ ಅವನಿಗೆ ಕಾಲಾವಕಾಶವನ್ನು ಕೊಡಬೇಕಾಗುತ್ತದೆ. ಹಾಗಾಗಿ ಏನು ನಷ್ಟವಾಗುತ್ತದೆ ಎನ್ನುವುದು ಕೂಡ ಅವನಿಗೆ ಮನವರಿಕೆ ಆಗುತ್ತದೆ. ಹಾಗೆಯೇ ಬ್ಯಾಂಕ್ ಮೂಲಕ ಸಾಲ ತೆಗೆದುಕೊಂಡಂಥ ರೈತರಿಗೆ ಪ್ರೀಮಿಯಂನ್ನು ಕಡ್ಡಾಯವಾಗಿ ಮುರಿದುಕೊಳ್ಳುತ್ತಾರೆ. ಆದರೆ ಅಲ್ಲಿ ಇಳುವರಿ ಬಂದರೆ ಆ ಹಣ ಇವತ್ತು ಬ್ಯಾಂಕಿಗೆ ಜಮಾ ಆಗುತ್ತದೆ. ಇಳುವರಿ ಬರದೇ ಇದ್ದಾಗ ರೈತನಿಗೆ ವಿಮೆ ಸಿಗುತ್ತದೆ. ಆದರೆ ರೈತನಿಗೆ ಏನು ಆಪ್ಶನ್ ಇಡಬೇಕು ಎಂದರೆ ಈ ಕಡ್ಡಾಯವನ್ನು ತೆಗೆದುಹಾಕಬೇಕು. ರೈತ ಇವತ್ತು ಅಪೇಕ್ಷೆ ಪಟ್ಟರೆ ಪ್ರೀಮಿಯಂನ್ನು ಉಳಿಸಿಕೊಳ್ಳಬೇಕು ಇಲ್ಲದಿದ್ದರೆ ಪ್ರೀಮಿಯಂ ಹಣವನ್ನು ವಾಪಸ್ಸು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈಗ ನಮ್ಮ ತುಂಗಭದ್ರಾ ಅಣೆಕಟ್ಟಿನ ಬಗ್ಗೆ ಕೂಡ ಒಂದು ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಸಾರಿ ಎಡ ಮತ್ತು ಬಲದಂಡೆ ಕಾಲುವೆಗಳು ಸುಮಾರು ಏಳು ಸಾರಿ ಬ್ರೀಚ್ ಆಗಿವೆ. ಏಳು ಸಾರಿ ಬ್ರೀಚ್ ಆಗಿರುವುದರಿಂದ ಆ ಭಾಗದ ರೈತರಿಗೆ ಲಾಭ ಬರತಕ್ಕಂಥಾದ್ದರಲ್ಲಿ ಹಾನಿಯಾಗಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಈಗ ಮೂರು ವರ್ಷ ಸತತವಾಗಿ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಈಗ ತುಂಗಭದ್ರಾ ಅಚ್ಚುಕಟ್ಟಿನಲ್ಲಿ ಒಂದು ಕ್ರಾಪ್ ಮಾತ್ರ ಬೆಳೆಯುವುದಕ್ಕೆ ಅವಕಾಶವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ಮುಂದಾಲೋಚನೆ ಮಾಡಿ ಸುಮಾರು ನೂರರಿಂದ ನೂರೈವತ್ತು ಕೋಟಿ ರೂಪಾಯಿಗಳ ಒಂದು ಆ್ಯಕ್ಷನ್ ಪ್ಲಾನ್‌ನ್ನು ಮಾಡಿ ಎಷ್ಟು ಹಣ ಬೇಕಾಗುತ್ತದೆ ಎಂದು ಅಂದಾಜನ್ನೂ ಕೂಡ ಕೊಟ್ಟಿದ್ದಾರೆ. ಆದರೆ ಸರ್ಕಾರ ಇದರ ಬಗ್ಗೆ ಒಂದು ದಿಟ್ಟವಾದಂಥ ಹೆಜ್ಜೆಯಿಟ್ಟು ಎಡ ಮತ್ತು ಬಲದಂಡೆಯನ್ನು ಸ್ಟೆಂಗ್ತನ್ ಮಾಡತಕ್ಕಂಥಾದ್ದು ಮತ್ತು ಈಗ ಹಣ ಇಲ್ಲವೆಂದರೆ ಕರ್ನಾಟಕ ನೀರಾವರಿ ನಿಗಮಕ್ಕಾದರೂ ಕೊಟ್ಟು ಶಾಶ್ವತವಾಗಿ ಇವತ್ತು ಬ್ರೀಚ್ ಆಗದೇ ಇರುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆ ಎಂದು ಕೂಡ ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಇದಲ್ಲದೆ ವಿದ್ಯುತ್ ಸಮಸ್ಯೆ ಬಗ್ಗೆ......

ಅಧ್ಯಕ್ಷರು : ಇದರ ಬಗ್ಗೆ ಸುಮಾರು ಹತ್ತು–ಹನ್ನೆರಡು ಮಂದಿ ಹೇಳಿದ್ದಾರೆ. ಇದೆಲ್ಲ ಅವರು ಹೇಳಿದ್ದಾರೆ. ಅವರು ಹೇಳಿದ್ದನ್ನೇ ಏಕೆ ರಿಪೀಟ್ ಮಾಡುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದು ಸರ್ಕಾರಕ್ಕೆ ಗೊತ್ತಿದೆ ಮತ್ತು ಪ್ರತಿಯೊಬ್ಬ ಶಾಸಕರಿಗೂ ಗೊತ್ತಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಐದು ವರ್ಷದಲ್ಲಿ ಒಂದು ಮೆಗಾವ್ಯಾಟ್ ಆದರೂ ಉತ್ಪಾದನೆ ಆಗಬೇಕಲ್ಲಾ? ಇವತ್ತು ವಿದ್ಯುತ್ತಿನ ಪ್ರಗತಿಯನ್ನು ಕಾಣದೇ ಇದ್ದರೆ ಆರ್ಥಿಕ ವಲಯದಲ್ಲಿ ನಾವು ಕುಸಿದುಹೋಗುತ್ತೇವೆ. ಆದ್ದರಿಂದ ಇದರ ಬಗ್ಗೆ ಪೂರ್ವಾಪರ ಆಲೋಚನೆ ಮತ್ತು ಚಿಂತನೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು : ಸಾಕು ಸಂಗಣ್ಣನವರೇ, ಮುಂದೆ ಬಜೆಟ್ ಮಂಡನೆಯಾಗುತ್ತದೆಯಲ್ಲಾ, ಆವಾಗ ಬೇಕಾದರೆ ನಿಮಗೆ ಇನ್ನೂ ಹೆಚ್ಚು ಸಮಯ ಕೊಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಆಗ ಅಸೆಂಬ್ಲಿ ಇರಬೇಕಲ್ಲಾ?

ಶ್ರೀ ಎ. ಕೃಷ್ಣಪ್ಪ : ಅಸೆಂಬ್ಲಿ ಎಲ್ಲಿಯೂ ಹೋಗುವುದಿಲ್ಲ. ಅದು ಇಲ್ಲಿಯೇ ಇರುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಮುಖ್ಯಮಂತ್ರಿಗಳು ಜನಸ್ಪಂದನ ಕಾರ್ಯಕ್ರಮವನ್ನು ಹಾಕಿಕೊಂಡಾಗ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಗೀರ್ ಅಹಮದ್ ಸಾಹೇಬರು ನಮ್ಮಲ್ಲಿ ಲಮಾಣಿ ಜನಾಂಗದವರಿಗೆ ಕಂಪ್ಲೀಟ್ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿ ಘೋಷಣೆಯನ್ನು ಮಾಡಿದ್ದರು. ಅದಕ್ಕೆ ಅಲೊಕೇಶನ್ ಕೂಡ ಕೊಟ್ಟಿದ್ದಾರೆ. ಆದರೆ ಹಣ ಮಾತ್ರ ಬಿಡುಗಡೆ ಆಗಿಲ್ಲ. ಇದರ ಬಗ್ಗೆ ಇವರು ಉತ್ತರ ಹೇಳಬೇಕು. ಮಾನ್ಯ ಅಧ್ಯಕ್ಷರೇ, ಜನಸ್ಪಂದನ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಹಾಕಿಕೊಂಡಿದ್ದರು. ಅದು ಬಹಳ ಒಳ್ಳೆಯ ಕಾರ್ಯಕ್ರಮ. ಅದು ನೇರವಾಗಿ ಜನರ ಸಮಸ್ಯೆಗಳನ್ನು ತಿಳಿದುಕೊಳ್ಳತಕ್ಕಂಥಾದ್ದು ನಮ್ಮ ಕ್ಷೇತ್ರದಲ್ಲಿ ಹಿರೆಸುಳೀಕೆರೆ ತಾಂಡದಲ್ಲಿ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿದರು. ಅದೇನೆಂದರೆ ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇರುವಂಥ ರಾಠೋಡ್ ಜನಾಂಗದವರಿಗೆ, ಯಾರಾದರೂ ಇವತ್ತು ಮನೆಯಿಲ್ಲದಂಥ ಫಲಾನುಭವಿಗಳಿದ್ದರೆ ಅವರಿಗೆ ಒಂದೇ ಸಾರಿ ನಾವು ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಘೋಷಣೆ ಮಾಡಿದರು. ಅದರ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಅಲೊಕೇಶನ್ ಕೂಡ ಕೊಟ್ಟಿದ್ದಾರೆ. ಆದರೆ ಹಣ ಬಿಡುಗಡೆಯಾಗಿಲ್ಲ. ಅದಕ್ಕೆ ಹಣ ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಗೆ ಸರ್ಕಾರ ಬರಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ...... ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಐದು ನಿಮಿಷ ಅವರಿಗೆ ಕೊಡಿ.

ಅಧ್ಯಕ್ಷರು : ಐದೂವರೆ ಗಂಟೆ ಅಂತ ನಾವು ಏರ್ಪಾಟು ಮಾಡಿದ್ದೇವೆ. ದೊಡ್ಡ ದೊಡ್ಡ ನಾಯಕರು ಸ್ವಲ್ಪ ಕಡಿಮೆ ಮಾತನಾಡಿದ್ದರೆ ಎಲ್ಲಾ ಸರಿಹೋಗುತ್ತಿತ್ತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನೇಕಾರರ ಸಮಸ್ಯೆ ಒಂದು ಹೇಳಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಮ್ಮಲ್ಲಿ ಏನಾಗಿದೆ ಎಂದರೆ, ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೇಕಾರರಿಗೆ ಕಚ್ಚಾನೂಲು ಪೂರೈಕೆಯಾಗುತ್ತಿಲ್ಲ. ಮಾರ್ಕೆಟಿಂಗ್ ವ್ಯವಸ್ಥೆಯಿಲ್ಲ. ಮತ್ತು ಅವರಿಗೆ ನಿರಂತರವಾಗಿ ಉದ್ಯೋಗ ಸಿಗುತ್ತಿಲ್ಲ. ನೇಕಾರರಿಗೆ ಒಂದು ಪ್ಯಾಕೇಜ್‌ನ್ನು ಘೋಷಣೆ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿಕೊಳ್ಳುತ್ತಲೇ ಇರುತ್ತಾರೆ. ನಮ್ಮ ಜಿಲ್ಲಾ ಮಂತ್ರಿಗಳ ಮನೆಗೆ ನಾಳೆ ನಾಡದ್ದು ನಮ್ಮ ಜಿಲ್ಲೆಯ ನೇಕಾರರು ಮುತ್ತಿಗೆ ಹಾಕತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದು ಅವರಿಗೆ ಗೊತ್ತಿದೆ. ಇವತ್ತು ರೈತರ ನಂತರ ಬರತಕ್ಕವರು ನೇಕಾರರು. ಈಗ ಏನು 450 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡರಲ್ಲಾ ಇವತ್ತು ನೇಕಾರರೂ ಕೂಡ ಗುಳೇದಗುಡ್ಡದಲ್ಲಿ, ಮಾನ್ಯ ನಂಜಯ್ಯನಮಠ ಅವರ ಕ್ಷೇತ್ರದಲ್ಲಿ, ಇಬ್ಬರು ಆತ್ಮಹತ್ಯೆ ಮಾಡಿಕೊಂಡರು ಇವತ್ತು ಈ ಸರ್ಕಾರ ಬಡವರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಆ ಕಾರಣಕ್ಕೆ ಆ ನೇಕಾರರ ಬಗ್ಗೆ ಇವತ್ತು ಸ್ಪಂದಿಸತಕ್ಕಂಥ ಏನು ಇವರ ಪ್ಯಾಕೇಜ್ ಅಂತ ಹೇಳಿದ್ದಾರೆ, ಅವರಿಗೆ ವಿದ್ಯುತ್‌ನ್ನು ಸಬ್ಸಿಡಿ ರೂಪದಲ್ಲಿ

ಕೊಡತಕ್ಕಂಥಾದ್ದು ಇರಬಹುದು, ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವಿಚಾರ ಇರಬಹುದು. ಅದರಲ್ಲಿ ಒಂದು ದಾಪುಗಾಲು ಹೆಜ್ಜೆಯನ್ನು ಈ ಸರ್ಕಾರ ಇಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ನಾರಾಯಣಸ್ವಾಮಿಯವರೇ, ನೀವು ಎರಡು ನಿಮಿಷ ಬೇಕಾದರೆ ಮಾತನಾಡಿ. ಕೊನೆಯ ಭಾಷಣಕಾರರು ಶ್ರೀ ಶೆಟ್ಟರ್ ಅವರು,

ಶ್ರೀ ಎ. ನಾರಾಯಣ್‌ಸ್ವಾಮಿ (ಆನೇಕಲ್) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಪ್ರಸ್ತಾವನೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು. ಬರಗಾಲದ ವಿಚಾರವನ್ನು ಈ ಸದನದಲ್ಲಿ ಬಹುತೇಕ ಹಿರಿಯರು ಪ್ರಸ್ತಾಪ ಮಾಡಿದ್ದಾರೆ. ನನ್ನ ಅನುಭವದಂತೆ ಮೂರು ವರ್ಷಗಳಿಂದ ಬರಗಾಲ ರಾಜ್ಯದಲ್ಲಿದೆ. ಪ್ರತಿ ಕ್ಷೇತ್ರಕ್ಕೆ 40 ಲಕ್ಷ ರೂ.ಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಬರಗಾಲದಲ್ಲಿ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಎಲ್ಲಾ ಶಾಸಕರಿಗೂ ಪತ್ರ ಬಂದಂತೆ ನನಗೂ ಪತ್ರ ಬಂದಿತ್ತು. ಆ ಪತ್ರಕ್ಕೆ ತಕ್ಕಂತೆ 40 ಲಕ್ಷ ರೂಪಾಯಿ ವರ್ಕ್ಸ್ ಅಲಾಟ್‌ಮೆಂಟ್ ಎನ್‌ಸಿಸಿಎಫ್ –1, 2, 3, 4, ಒಂದು ಕೋಟಿ ಅರವತ್ತು ಲಕ್ಷ ರೂ. ಈ ವಿಚಾರ ಎಲ್ಲಾ ಹಳ್ಳಿಗಳಿಗೂ ಹೋಯಿತು, ನಮ್ಮ ಊರಿನಲ್ಲೇನೋ ಕೆಲಸ ಮಾಡುತ್ತಾರಂತೆ, ನಮ್ಮ ಊರಿನಲ್ಲೇನೋ ಕೆರೆಯ ಹೂಳನ್ನು ಎತ್ತುತ್ತಾರಂತೆ ಎಂದು, ತಿಂಗಳಿಗೆ ಒಂದು ಆದೇಶ, ಮೂರು ವರ್ಷಗಳಿಂದ ಬಂದಿದ್ದು ಕೇವಲ 70 ಲಕ್ಷ ರೂ ಇನ್ನು 90 ಲಕ್ಷ ರೂ. ಇಲ್ಲ ಜಿಲ್ಲಾಧಿಕಾರಿಗಳಿಗೆ, ಸರ್ಕಾರಕ್ಕೆ ಕೇಳಿದರೆ ಬರುತ್ತಿದೆ ಸಾರ್ ಎಂದು ಹೇಳುತ್ತಾರೆ. ಇನ್ನೂ ಟ್ರೈನ್ ಡೆಲ್ಲಿಯಿಂದ ಹೊರಡಲಿಲ್ಲ ಸಾರ್, ಹಾಗಲ್ಲಾ ಸಾರ್, ತಾವು ಆದೇಶ ಮಾಡಿದ್ದೀರಿ, ವರ್ಕ್ಸ್ ಆರ್ಡರ್ ಮಾಡಿದ್ದೀರಿ, ಆ್ಯಕ್ಷನ್ ಪ್ಲಾನ್ ಆಗಿದೆ, ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆ, ಅಪ್ರೂವಲ್ ಆಗಿದೆ, ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಆಗಿದೆ, ಮತ್ತೇಕೆ ಡಿಲೇ ಮಾಡುತ್ತಿದ್ದೀರಾ? ಕೇಂದ್ರದಿಂದ, ದೆಹಲಿಯಿಂದ ಬಂದಿಲ್ಲ ಸಾರ್, ಹಾಗಾದರೆ ರಾಜ್ಯ ಸರ್ಕಾರದ ಜವಾಬ್ದಾರಿ ಏನು? 2004ನೇ ಮಾಡಲ್ ರಾಜ್ಯಪಾಲರ ವಂದನಾ ನಿರ್ಣಯದ ಪುಸ್ತಕ, ನಾಲ್ಕೈದು ವರ್ಷಗಳಿಂದ ಒಂದೇ ಮಾಡೆಲ್. ಈ ಸರ್ಕಾರದಲ್ಲಿ ಏನೂ ಬದಲಾವಣೆಯಾಗಲಿಲ್ಲ. ಏನು ಇವತ್ತು ರಾಜ್ಯಪಾಲರ ಭಾಷಣದ ಬಗ್ಗೆ ಪುಸ್ತಕವನ್ನು ಪ್ರಿಂಟ್ ಮಾಡಿದ್ದಾರೆ, ನಾಲ್ಕು ವರ್ಷದಿಂದ ಇದೇ ಆಗುತ್ತಿದೆ, ಯಾವುದೇ ವರ್ಡ್ ಬದಲಾವಣೆಯಾಗಲಿಲ್ಲ. ಈ ಸರ್ಕಾರದಲ್ಲಿ ಯಾವುದೇ ವ್ಯವಸ್ಥೆ ಬದಲಾವಣೆಯಾಗಲಿಲ್ಲ. ಹಿರಿಯ ಮಂತ್ರಿಗಳಿದ್ದಾರೆ. ಕೊಳವೆ ಬಾವಿಗಳನ್ನು ಹೊಸದಾಗಿ ತೆಗೆಯಬಾರದು, ಕೇಂದ್ರ ಸರ್ಕಾರ ಹಣವನ್ನು ಕೊಡಲು ನಿಭಂದನೆಯನ್ನು ಹಾಕಿದ್ದಾರೆ, ನಿಮ್ಮಲ್ಲೇ ಕೊಳವೆ ಬಾವಿಗಳನ್ನು ತೆಗೆಯಲು ಹಣವನ್ನು ಮಂಜೂರು ಮಾಡುತ್ತೀರಲ್ಲಾ, ಅದಕ್ಕೆ ಯಾವ ನಿಭಂದನೆ? ಅದಕ್ಕೆ ಆದೇಶ ಮಾಡಿ, ಕೇಂದ್ರ ಸರ್ಕಾರ ಹಣವನ್ನು ಕೊಡಲು ನಾರ್ಮ್ಸನ್ನು ನಿಗದಿ ಮಾಡಿದ್ದಾರೆ, ಅದಕ್ಕೆ ಆದೇಶ ಮಾಡಿ, ಕೇಂದ್ರ ಸರ್ಕಾರದ ಸೂಚನೆಯನ್ನು ಫಾಲೋ ಮಾಡಲೇ ಬೇಕೆಂದರೆ ನಿಮ್ಮಲ್ಲಿರತಕ್ಕ ಹಣ, ಬರಗಾಲದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ನಿಮ್ಮ ಜವಾಬ್ದಾರಿ ಏನು? ಕೇಂದ್ರ ಸರ್ಕಾರ ಆದೇಶ ಮಾಡಿದ್ದಾರೆ, ನಾವು ಕೊಳವೆ ಬಾವಿ ತೆಗೆಯುವುದಿಲ್ಲ. ಹಳ್ಳಿಗಳಲ್ಲಿ ರಸ್ತೆ ಕೊಡುವುದು ಬೇಡ, ದೀಪವನ್ನು ಕೊಡುವುದು ಬೇಡ, ಕೂಲಿಗಾಗಿ ಕಾಳು ಕೊಡತಕ್ಕದ್ದು ಬೇಡ, ಕುಡಿಯಲು ನೀರನ್ನು ಕೊಡಲು ಆಗುವುದಿಲ್ಲವೇ? ದಯವಿಟ್ಟು ಸರ್ಕಾರ ಚಿಂತನೆ ಮಾಡಬೇಕು, ಮಿಕ್ಕೆಲ್ಲಾ ಇನ್‌ಫ್ರಾಸ್ಟ್ರಕ್ಚರನ್ನು ಕೊಡುವುದನ್ನು ಬಿಟ್ಟು ಕೊನೆಯ ಪಕ್ಷ ಸಾರ್ವಜನಿಕರಿಗೆ, ನಾಗರೀಕರಿಗೆ

ಕುಡಿಯುವ ನೀರಿನ ವ್ಯವಸ್ಥೆಗೆ ಪ್ರತ್ಯೇಕವಾದ ಆದೇಶ, ಪ್ರತ್ಯೇಕವಾದ ಫಂಡ್ಸ್‌ನ್ನು ಮೀಸಲಿಡಬೇಕು. ಇದು ಪ್ರಥಮ ಆದ್ಯತೆ ಎಂಬುದನ್ನು ಸರ್ಕಾರ ತೀರ್ಮಾನ ಮಾಡಬೇಕೆಂದು ಮನವಿ ಮಾಡುತ್ತೇನೆ. ಅದರ ಜೊತೆಗೆ ಕೇಂದ್ರ ಸರ್ಕಾರದಿಂದ ಅಕ್ಕಿ, ಕಾಳು ಬರಲಿಲ್ಲವೆಂದು ಅದಕ್ಕೆ ಮ್ಯಾಚಿಂಗ್ ಗ್ರಾಂಟ್ಸ್‌ನ್ನು ಕೊಡಲು ಮೀನಾಮೇಷವನ್ನೆಣಿಸುವುದು, ಅಕ್ಕಿ ಬಂದ ಮೇಲೆ ಹಣವನ್ನು ಮಂಜೂರು ಮಾಡುತ್ತೇವೆ, ಆದರೆ ತಮ್ಮ ಜವಾಬ್ದಾರಿಯಿಂದ ಮೊದಲು ಕೆಲಸ ಮಾಡಿ ಎಂದು ಸರ್ಕಾರದಲ್ಲಿ ಮನವಿ ಮಾಡಲು ಇಚ್ಛೆ ಪಡುತ್ತೇನೆ. ಹಳದಿ ಕಾರ್ಡುಗಳ ಬಗ್ಗೆ ಮಾನ್ಯ ಸಿಂಧ್ಯಾರವರು ಮತ್ತು ಹಿರಿಯ ಸದಸ್ಯರುಗಳು ಚರ್ಚೆ ಮಾಡಿದ್ದಾರೆ. ಹಳದಿ ಕಾರ್ಡುಗಳು ಪ್ರಿಂಟ್ ಆದವು. ಹಸಿರು ಕಾರ್ಡುಗಳಿಗೆ ಅಕ್ಕಿಯನ್ನು ಕೊಡಬೇಕೋ ಬೇಡವೋ ಎಂಬ ಬಗ್ಗೆ ಯಾವುದೇ ಅಧಿಕಾರಿಗಳಿಗೆ ಮುಂದಾಲೋಚನೆ ಇಲ್ಲ. ಪ್ರಚಾರ ಮಾಡಲಿಲ್ಲ. ಗ್ರಾಮಸಭೆಗಳಲ್ಲಿ ಹೋಗಲಿಲ್ಲ. ಹೇಳಲಿಲ್ಲ. ಹಳದಿ ಕಾರ್ಡಿಗೆ ಆರು ರೂಪಾಯಿಗಳಿಗೆ ಅಕ್ಕಿಯನ್ನು ಕೊಡುತ್ತಾರೆ, ಹಳದಿ ಕಾರ್ಡಿಗೆ ಇದು ಬದಲಾವಣೆಯಾಗುವುದಿಲ್ಲವೆಂದು ಕೂಲಿಕಾರ್ಮಿಕರು ಮನೆಯಲ್ಲಿ ಇದ್ದರು. ನವೆಂಬರ್ ಬಂತು, ಹಸಿರು ಕಾರ್ಡನ್ನು ತೆಗೆದುಕೊಂಡು ಜನರು ಹೋದರು, ಈ ಕಾರ್ಡ್‌ಗೆ ಬೆಲೆ ಇಲ್ಲ ನೀನು ಮನೆಗೆ ವಾಪಸ್ ಹೋಗು ಎಂದರು. ಇದು ಸರ್ಕಾರದ ಗಮನಕ್ಕೆ ಬಂತು, ಸರ್ಕಾರ ಇದರ ಬಗ್ಗೆ ಮತ್ತೆ ಪುನರ್ವಿಮರ್ಶೆ ಮಾಡಿತು. ಹಸಿರು ಒಪ್ಪಿಕೊಂಡಿರಿ, ಯಾವ ಹಸಿರು ಕಾರ್ಡುದಾರ ಅರ್ಜಿಯನ್ನು ಹಾಕಲಿಲ್ಲ. ಅವರಿಗೆ ಮತ್ತೆ ಹಳದಿ ಕಾರ್ಡನ್ನು ಕೊಡುತ್ತೇವೆಂದು ದಿನಾಂಕವನ್ನು ನಿಗದಿ ಮಾಡಿದಿರಿ. ಎರಡು ತಿಂಗಳಾದರೂ ನೀವು ಹಳದಿ ಕಾರ್ಡನ್ನು ಕೊಡಲಿಲ್ಲ. ಬದಲಾವಣೆ ಮಾಡಲಿಲ್ಲ. ನೀವು ಹಸಿರುಕಾರ್ಡನ್ನು ಕೊಟ್ಟುಬಿಡಿ ನಿಮಗೆ ಚೀಟಿಯನ್ನು ಕೊಡುತ್ತೇವೆ, ಮೂರು ತಿಂಗಳಿನಿಂದ ಆ ಟೋಕನ್ ರೂಪದ ಚೀಟಿಯನ್ನು ರೇಷನ್ ಅಂಗಡಿಯ ಹತ್ತಿರ ತೆಗೆದುಕೊಂಡು ಹೋಗುವುದು, ವಾಪಸ್ ಬರುವುದು. ನಾಲ್ಕು ವರ್ಷಗಳಿಂದ ನಿಮ್ಮಲ್ಲಿ ಹಳದಿ ಕಾರ್ಡನ್ನು ಪ್ರಿಂಟ್ ಮಾಡಿಲ್ಲ. ಪ್ರಿಂಟ್ ಮಾಡಲು ಹಳದಿ ಕಾರ್ಡಿನ ಸ್ಟಾಕ್ ಇಲ್ಲ. ನಾಲ್ಕು ವರ್ಷಗಳಿಂದ ಹಳದಿ ಕಾರ್ಡನ್ನು ಕೊಡುತ್ತೇವೆಂದು ಹೇಳಿ, ತಮ್ಮ ಹತ್ತಿರ ಹಳದಿ ಕಾರ್ಡಿನ ಸ್ಟಾಕ್ ಇಲ್ಲ. ಕೇವಲ ವೈಟ್ ಪೇಪರ್‌ನ ಟೋಕನ್‌ನ್ನು ಕೊಡುತ್ತಿದ್ದೀರಿ. ಆ ಟೋಕನ್‌ಗೂ ಅಕ್ಕಿ ಇಲ್ಲ. ಕಡುಬಡವ ಅಕ್ಕಿ ಬೇಕು, ಸೀಮೆ ಎಣ್ಣೆ ಬೇಕು, ಮೂರು ತಿಂಗಳಿನಿಂದ ಅವನಿಗೆ ಅಕ್ಕಿ, ಸಕ್ಕರೆ ಸೀಮೆ ಎಣ್ಣೆಯನ್ನು ಕೊಡಲು ಆಗಿಲ್ಲ. ನಾವು ಸಮರ್ಥ ಸರ್ಕಾರ, ಬರಗಾಲವನ್ನು ನಿಭಾಯಿಸಿ ನಾಲ್ಕು ವರ್ಷಗಳ ಆಡಳಿತವನ್ನು ನಡೆಸಿದ್ದೇವೆ, ಸರ್ಕಾರ, ಮಂತ್ರಿಗಳು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವುದಲ್ಲ. ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಯಾವುದೋ ಏರೋಪ್ಲೇನ್ ತರುತ್ತೇವೆ, ರಸ್ತೆ ಮಾಡುತ್ತೇವೆ ಎಂಬುದಲ್ಲ. ಕೊನೆಯ ಪಕ್ಷ ಕಡು ಬಡವರಿಗೆ ಅವಶ್ಯಕತೆ ಇರತಕ್ಕಂಥ ಒಪ್ಪತ್ತಿಗೂ ಊಟ ಇಲ್ಲದಿರುವ ಜನರಿಗೆ ಅಕ್ಕಿ, ಗೋಧಿ, ಸಕ್ಕರೆಯನ್ನು ಕೊಡಬೇಕು. ಇವತ್ತು ನೂರಕ್ಕೆ ಒಂಭತ್ತು ಪರ್‌ಸೆಂಟ್ ಬಹುತೇಕ ಮಂದಿ ವಿದ್ಯಾಭ್ಯಾಸವನ್ನು ಸೀಮೆಎಣ್ಣೆ ಬುಡ್ಡಿಗಳಲ್ಲೇ ಮಾಡಬೇಕು. ಏಕೆಂದರೆ ಭಾಗ್ಯಜ್ಯೋತಿಯನ್ನು ಕಿತ್ತುಹಾಕಿಬಿಟ್ಟಿದ್ದೀರಿ. ಭಾಗ್ಯ ಜ್ಯೋತಿಯನ್ನು ಕೊಡಿ ಎಂದು ನಿಮ್ಮನ್ನು ಯಾರೂ ಕೇಳಿರಲಿಲ್ಲ. ನಮಗೆ ಭಾಗ್ಯ ಜ್ಯೋತಿಯನ್ನು ಕೊಡಿ ಎಂದು ಯಾರೂ ಬಂದು ಅರ್ಜಿಯನ್ನು ಹಾಕಿರಲಿಲ್ಲ. ಗ್ರಾಮಪಂಚಾಯಿತಿಯಲ್ಲಿ ನೀವೇ ಲಿಸ್ಟ್ ಮಾಡಿದಿರಿ. ನೀವೇ ವೈರ್ ಹಾಕಿದಿರಿ, ಬೋರ್ಡ್ ಹಾಕಿದಿರಿ, ಲೈಟ್ ಹಾಕಿದಿರಿ, ಮೂರೇ ದಿವಸಕ್ಕೆ ಭಾಗ್ಯಜ್ಯೋತಿಯನ್ನು ಕಿತ್ತು ಹಾಕಿದಿರಿ. ಆ ಮಕ್ಕಳು ವಿದ್ಯಾಭ್ಯಾಸವನ್ನು ಎಲ್ಲಿ ಮಾಡಬೇಕು? ಇದು ಗಂಭೀರವಾದ ವಿಚಾರ.

ಯಾವ ಕಡುಬಡವ, ಗುಡಿಸಲಿನಲ್ಲಿ ಯಾರು ಇರುತ್ತಾರೆ, ಕೊಳಚೆ ಪ್ರದೇಶದಲ್ಲಿ ಯಾರು ಇರುತ್ತಾರೆ ಅವನಿಗೆ ವಿದ್ಯುತ್ ದೀಪವೂ ಇಲ್ಲ. ಆ ಮಕ್ಕಳಿಗೆ ಓದಿಕೊಳ್ಳಲು ಸೀಮೆಎಣ್ಣೆ ಕೊಡಲು ಆಗುವುದಿಲ್ಲವೆಂದರೆ ಅವರು ಯಾವ ರೀತಿಯಾಗಿ ವಿದ್ಯಾಭ್ಯಾಸವನ್ನು ಮಾಡಬೇಕು? ಅದಕ್ಕೆ ಸರ್ಕಾರ ತಕ್ಷಣ ಉತ್ತರವನ್ನು ಕೊಟ್ಟು ತಾವೇನು ಟೋಕನ್‌ನ್ನು ಕೊಟ್ಟಿದ್ದೀರಿ, ಟೋಕನ್‌ನ್ನು ತಮ್ಮ ಸರ್ಕಾರದಿಂದ, ಕಛೇರಿಯಿಂದ ಕೊಟ್ಟಿರತಕ್ಕದ್ದು, ಯಾವುದೇ ವ್ಯಕ್ತಿ ಕೊಟ್ಟಿರುವುದಲ್ಲ. ಆ ಟೋಕನ್‌ಗಳಿಗೆ ಅಕ್ಕಿ, ಸಕ್ಕರೆ, ಗೋಧಿಯನ್ನು ನೀಡುತ್ತೇವೆ ಎಂಬ ಭರವಸೆಯನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ಅದರ ಜೊತೆಗೆ ರೇಷನ್ ಕಾರ್ಡ್ಸ್, ಎಲ್ಲೂ ಇಲ್ಲ, ಅದು ಇರುವುದು ಕಾಂಗ್ರೆಸ್ ಕಾರ್ಯಕರ್ತರ ಮನೆಯಲ್ಲಿ, ಅದು ವಿಲೇಜ್ ಅಕೌಂಟೆಂಟ್ ಹತ್ತಿರ ಇಲ್ಲ, ಪಂಚಾಯಿತಿಯ ಸೆಕ್ರೆಟರಿ ಹತ್ತಿರ ಇಲ್ಲ. ತಾಲ್ಲೂಕು ಕಛೇರಿಯಲ್ಲಿ ಇಲ್ಲ. ಯಾವುದೋ ಒಂದು ಕಾರ್ಯಕರ್ತರ ಮನೆಗೆ ಎಲ್ಲರೂ ಹೋಗಬೇಕು. ಅಲ್ಲಿಗೆ ಹೋಗಿ ಅವನಿಗೆ ಐದುನೂರು ರೂಪಾಯಿ ಕೊಟ್ಟರೆ ರೇಷನ್ ಕಾರ್ಡ್. ಇಲ್ಲದಿದ್ದರೆ ರೇಷನ್ ಕಾರ್ಡ್ ಇಲ್ಲ. ಆಡಳಿತ ಯಂತ್ರವಿದೆ, ಸರ್ಕಾರದಲ್ಲಿ ತಮ್ಮ ವ್ಯವಸ್ಥೆ ಹೇಗೆ ನಡೆಯುತ್ತಿದೆ.....

ಶ್ರೀ ಎಂ. ಮಹದೇವು (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) : ಯಾವ ಕಾರ್ಯಕರ್ತರು ರೇಷನ್ ಕಾರ್ಡ್‌ನ್ನು ಇಟ್ಟುಕೊಂಡು ಐದು ನೂರುರೂಪಾಯಿ ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಾರೆ? ಸಾಮಾನ್ಯವಾಗಿ ವಿಲೇಜ್‌ಅಕೌಂಟೆಂಟ್ ಹತ್ತಿರ ಕೊಡುತ್ತಾರೆ. ತಹಸೀಲ್ದಾರರು, ರೆವಿನ್ಯೂ ಇನ್‌ಸ್ಪೆಕ್ಟರ್ ಮೂಲಕ ಮಾಡಿಸುತ್ತಾರೆ. ರಾಜ್ಯದಲ್ಲಿ ಯಾವುದೇ ಕಾಂಗ್ರೆಸ್ ಕಾರ್ಯಕರ್ತರೂ ನೀವು ಕೊಡುವ ರೇಷನ್ ಕಾರ್ಡ್‌ನ್ನೆಲ್ಲಾ ನಮ್ಮ ಹತ್ತಿರ ಕೊಡಿ, ಐದು ನೂರು ರೂಪಾಯಿಗಳಂತೆ ನಾವು ಅದನ್ನು ಡಿಸ್ಟ್ರಿಬ್ಯೂಷನ್ ಮಾಡುತ್ತೇವೆಂದು ಹೇಳುವ ನಿದರ್ಶನಗಳು ಎಲ್ಲಿದೆ ದಯಮಾಡಿ ಹೇಳಿ?

ಶ್ರೀ ಎ. ನಾರಾಯಣಸ್ವಾಮಿ : ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಈ ಸದನದ ಗಮನವನ್ನು ಬೇರೆ ಕಡೆಗೆ ಸೆಳೆಯಲು ನಾನು ಇಷ್ಟಪಡುವುದಿಲ್ಲ. ನಾನು ಸತ್ಯಕ್ಕೆ ದೂರವಾದ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಮಾನ್ಯ ಕರಡಿ ಸಂಗಣ್ಣನವರು ನೇಕಾರರ ಬಗ್ಗೆ ಪ್ರಸ್ತಾಪ ಮಾಡಿದರು. ಇವತ್ತು ನೇಕಾರರ ಪರಿಸ್ಥಿತಿ ನಮ್ಮಮಂತ್ರಿಗಳಿಗೆ ಗೊತ್ತಿದೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಜವಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರು, ಮಾನ್ಯ ನಾರಾಯಣಸ್ವಾಮಿಯವರದ್ದು ಕೊನೆಯ ಭಾಷಣವೆಂದು ನಾನು ಸುಮ್ಮನೆಯೇ ಇದ್ದೇ, ಹಸಿರು ಕಾರ್ಡು, ಹಳದಿ ಕಾರ್ಡಿನ ಬಗ್ಗೆ ತಾವು ಇಷ್ಟೊಂದು ಮಾತನಾಡುತ್ತಿದ್ದೀರಿ. ವ್ಯತ್ಯಾಸವಾಗಿರುವುದನ್ನು ಸರಿಪಡಿಸಲು, ಹಸಿರು ಕಾರ್ಡು ಇರತಕ್ಕ ಎಲ್ಲರಿಗೂ ಹಳದಿ ಕಾರ್ಡು ಕೊಡುವುದೆಂದು ತೀರ್ಮಾನವಾಗಿದೆ. ಜೊತೆಗೆ ಕಾರ್ಡು ಇಲ್ಲದಿದ್ದರೆ ಡ್ಯೂಪ್ಲಿಕೇಟ್ ಕಾರ್ಡನ್ನು ಕೊಟ್ಟು ರೇಷನ್ ಕೊಡಲೂ ತೀರ್ಮಾನವಾಗಿದೆ. ಅದರ ಬಗ್ಗೆ ನಾವು ಎಲ್ಲಾ ಜಿಲ್ಲೆಗಳಲ್ಲೂ ಹೋಗಿ ನೋಡಿದ್ದೇವೆ. ಆನೇಕಲ್‌ನಲ್ಲೂ ನೋಡಿದ್ದೇವೆ. ಕಾರ್ಯಕರ್ತರು ಆ ರೀತಿ ಮಾಡುತ್ತಾರೆಂದು ಒಂದೇ ಮಾತಿನಲ್ಲಿ ಹೇಳುವುದಾದರೆ, ಹೇಳುವುದಾದರೆ ಸರಿಯಾಗಿ ಹೇಳಿ, ಸುಮ್ಮನೆ ಆ ರೀತಿ ಹೇಳಿಬಿಟ್ಟು ಕುಳಿತುಬಿಟ್ಟರೆ ಹೇಗೆ? ನಾವು ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಅನಂತರ ಹಣದ ಬಗ್ಗೆ ಇಷ್ಟು ಬಂದಿತ್ತು. ಅಷ್ಟು ಬಂದೇ ಇಲ್ಲವೆಂದು ಹೇಳುತ್ತೀರಿ, ತಾವೂ ಸ್ವಲ್ಪ ರೌಂಡ್ ಹೊಡೆಯಿರಿ

ಗೊತ್ತಾಗುತ್ತದೆ. ಪರಿಸ್ಥಿತಿ ಏನೇನಾಗಿದೆ ಎಂಬ ಬಗ್ಗೆ ನಾವೇನು ಆನೇಕಲ್‌ಗೆ ಬಂದು ನೋಡುತ್ತಿಲ್ಲವೇ? ಹೇಳುವುದಕ್ಕೂ ಸ್ವಲ್ಪ ಮಿತಿ ಇರಬೇಕು.

ಶ್ರೀ ಎ. ನಾರಾಯಣಸ್ವಾಮಿ : ಜಿಲ್ಲಾಧಿಕಾರಿಗಳ ಹತ್ತಿರ ದಾಖಲೆಗಳು ಇದೆ. ಟೋಕನ್‌ಗೆ ರೇಷನ್ ಕೊಡುತ್ತಿರುವುದು ಜನಜನಿತ. ಅದರ ಬಗ್ಗೆ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟು ಅದರ ನಕಲನ್ನು ಕೊಟ್ಟರೆ ತಮಗೆ ಅಭಿನಂದನೆಯನ್ನು ಅಧ್ಯಕ್ಷರ ಮೂಲಕ ಸಲ್ಲಿಸುತ್ತೇನೆ. ನೇಕಾರರ ಬಗ್ಗೆ ಹೇಳುವುದಾದರೆ, ನಮ್ಮ ಕ್ಷೇತ್ರದಲ್ಲಿ ವಿದ್ಯುತ್ ಮಗ್ಗಗಳು, ಕೈಮಗ್ಗಗಳು ಇದೆ. ನೂರಕ್ಕೆ ಎಂಭತ್ತು ಪರ್‌ಸೆಂಟ್ ವಿದ್ಯುತ್ ಮಗ್ಗಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಯಾರು ನೇಕಾರಿಕೆ ಮಾಡುತ್ತಿದ್ದಾರೆ, ಅದು ಆಂಧ್ರ ಪ್ರದೇಶವಿರಬಹುದು, ತಮಿಳುನಾಡು ಇರಬಹುದು, ಬಹುತೇಕ ರಾಜ್ಯಗಳಲ್ಲಿ ಆ ನೇಕಾರರಿಗೆ ವಿದ್ಯುತ್‌ನಲ್ಲಿ ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ಯಾಕೇಜನ್ನು ಅನೌನ್ಸ್ ಮಾಡುತ್ತೇವೆ, ಈ ಸಂಕಷ್ಟ ಕಾಲದಲ್ಲಿ ಸಬ್ಸಿಡಿ ಮತ್ತು ವಿದ್ಯುತ್ ಸಬ್ಸಿಡಿಯನ್ನು ಕೊಡುತ್ತೇವೆ ಎಂಬ ವಿಚಾರ ಪ್ರಸ್ತಾಪವಾಗುತ್ತಲೇ ಇದೆ. ಯಾವ ರೀತಿ ರೈತರ ಆತ್ಮಹತ್ಯೆಗೆ ಪ್ರಯತ್ನ ಮಾಡುತ್ತಿದ್ದಾರೆ ಅದೇ ರೀತಿ ನೇಕಾರರೂ ಬೀದಿಪಾಲಾಗಿಬಿಟ್ಟಿದ್ದಾರೆ. ಮಂತ್ರಿಗಳು ಮತ್ತು ಸರ್ಕಾರ ಜರೂರಾಗಿ ನೇಕಾರರ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಬರುತ್ತದೆ. ನನ್ನ ಕ್ಷೇತ್ರದಲ್ಲಂತೂ ಐದು ಸಾವಿರ ಕುಟುಂಬಗಳು ಬೀದಿಪಾಲಾಗಿದ್ದಾವೆ.

6.20 ಪಿಎಂ

ಆ ನೇಕಾರರಿಗೆ ಪರಿಹಾರದ ವ್ಯವಸ್ಥೆ ಏನು? ತಾಂತ್ರಿಕವಾಗಿ ಏನಾದರೂ ಸಲಹೆಗಳನ್ನು ಮಾರ್ಗದರ್ಶನವನ್ನು ಕೊಡಬೇಕಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ಇಡೀ ರಾಜ್ಯದಲ್ಲಿ ನೇಕಾರಿಕ ವೃತ್ತಿಯಲ್ಲಿರುವ ಬಹುತೇಕ ಕುಟುಂಬಗಳು ಬೀದಿ ಪಾಲಾಗುತ್ತಾರೆ ಎನ್ನುವುದನ್ನು ಸರ್ಕಾರ ಮನಗಾಣಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಇನ್ನು ಐದು ನಿಮಿಷದಲ್ಲಿ ಮುಗಿಸಬೇಕು. ನೀವು ಐದು ನಿಮಿಷ ಕೇಳಿದ್ದಕ್ಕೆ, ಹದಿನೈದು ನಿಮಿಷ ಕೊಟ್ಟಿದ್ದೇನೆ. ದಯವಿಟ್ಟು ಕೊನೇ ಪಾಯಿಂಟ್‌ಗೆ ಬನ್ನಿ. ಉತ್ತರ ಕೊಡುವುದಕ್ಕೆ ಈಗಾಗಲೇ ಒಂದು ಗಂಟೆ ತಡವಾಗಿದೆ. ಇನ್ನೊಂದು ಪಾಯಿಂಟ್ ಹೇಳಿ ಮುಗಿಸಿ.

ಶ್ರೀ ಕೆ.ಎ. ನಾರಾಯಣಸ್ವಾಮಿ : ಎಸ್.ಸಿ. ಎಸ್.ಟಿ. ಕಾರ್ಪೋರೇಷನ್‌ನಲ್ಲಿ ಕೊಳವೆ ಬಾವಿ ಬಗ್ಗೆ ನಮ್ಮ ಕಾಗೋಡು ತಿಮ್ಮಪ್ಪನವರು ಹೇಳುತ್ತಾ ಇದ್ದರು. ಆ ಬಜೆಟ್‌ಗೆ ಹೊಂದಿಕೊಂಡಂತೆ ಇಷ್ಟು ಹಣ ಕೊಡಬೇಕೆಂದು ಹೇಳಿ, ಇದು ಬಹಳ ಸ್ವಾಗತ ಅಧ್ಯಕ್ಷರೇ ಆದರೆ, ಯಾವ ಯಾವ ಕ್ಷೇತ್ರದಲ್ಲಿ, ಯಾವ ಯಾವ ಭೂಮಿಯಲ್ಲಿ ಎಷ್ಟು ಆಳದಲ್ಲಿ ನೀರು ಸಿಗುತ್ತಾ ಇದೆಯೆಂದು ಜಿಯಾಲಜಿಸ್ಟ್‌ಗಳಿಗೆ ಗೊತ್ತಿರಬೇಕಾಗುತ್ತದೆ. ಸರ್ಕಾರ ಮತ್ತು ಎಸ್.ಸಿ ಎಸ್.ಟಿ ಕಾರ್ಪೋರೇಷನ್ ಯಾವ ಜಿಲ್ಲೆಯಲ್ಲಿ, ಯಾವ ಕೊಳವೆ ಬಾವಿಗೆ ಎಷ್ಟು ದುಡ್ಡು ಆಗುತ್ತದೆ. ಎಂಬುದಕ್ಕೆ ಯಾರ ಹತ್ತಿರವೂ ಎಸ್ಟಿಮೇಟ್ ಇಲ್ಲ. ಅಧ್ಯಕ್ಷರೇ, ನಾವು ಲಿಸ್ಟ್ ಮಾಡಿ, ಕಳುಹಿಸಿಕೊಟ್ಟೆವು. ಒಬ್ಬ ದಲಿತ ಗೋಮಾಳದಲ್ಲಿ ಎರಡು ಎಕರೆ ಜಮೀನು ಸರ್ಕಾರದಿಂದ ಮಂಜೂರಾತಿ ಮಾಡಿಸಿಕೊಂಡಿರುತ್ತಾನೆ. ನಿನಗೆ ಬೋರ್‌ವೆಲ್ ಆಗಿದೆಯೆಂದು ಲಿಸ್ಟ್ ಮಾಡಿ ಕಳುಹಿಸಿಕೊಟ್ಟರೆ, ಅಲ್ಲಿಂದ ಒಂದು ನೋಟೀಸ್ ಬರುತ್ತದೆ. ಇಪ್ಪತ್ತೈದು ಸಾವಿರ ರೂಪಾಯಿ ಕಟ್ಟಿದರೆ, ನಿನಗೆ ಕೊಳವೆ ಬಾವಿ ಹಾಕುತ್ತೇವೆ. ಮೂವತ್ತು

ಸಾವಿರ ಕಟ್ಟಿದರೆ ನಿನಗೆ ಕೊಳವೆ ಬಾವಿ ಹಾಕುತ್ತೇವೆ, ನಿಮ್ಮ ಭೂಮಿಯಲ್ಲಿ ಆರುನೂರು ಅಡಿಯವರೆಗೆ ನೀರು ಇದೆ; ಎಂಟು ನೂರು ಅಡಿಗೆ ಇದೆ. ಈ ಪತ್ರ ತೆಗೆದುಕೊಂಡು ನನ್ನ ಹತ್ತಿರ ಆತ ಬಂದಿದ್ದ ಅಧ್ಯಕ್ಷರೇ. ಅವನು ಸೀಮೆಎಣ್ಣೆ ತೆಗೆದುಕೊಳ್ಳುವುದಕ್ಕೆ ಅವನ ಮನೆಯಲ್ಲಿ ಕಾಸಿಲ್ಲ. ಇನ್ನು ಮೂವತ್ತು ಸಾವಿರ ರೂಪಾಯಿ ಕಟ್ಟಬೇಕೆಂದು ಹೇಳಿದರೆ, ಈ ಯೋಜನೆ ಎಲ್ಲಿಗೆ ಹೋಗುತ್ತದೆ ಅಧ್ಯಕ್ಷರೇ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಕಡೆ ಗಮನಿಸಬೇಕು. ಬಹುತೇಕ ನಮ್ಮ ರಾಜ್ಯದಲ್ಲಿ ಖಾಸಗಿಯಾಗಿ ಬೋರ್‌ವೆಲ್ ಹಾಕಿದರೆ 50 ರಿಂದ 55 ರೂಪಾಯಿ. ನಾನು ಎಸ್.ಸಿ. ಎಸ್.ಟಿ ಕಾರ್ಪೊರೇಷನ್‌ನವರನ್ನು ನೀವೇಕೆ 250 ರೂಪಾಯಿ ಹಾಕಿದ್ದೀರಿ ಎಂದು ಕೇಳಿದೆ. ಅದಕ್ಕೆ, ಅವರು ಸಾರ್ ನಮ್ಮದು ನೋ ವಾಟರ್, ನೋ ಮನಿ. ಅದಕ್ಕೆ ಸಾರ್, ನಮಗೆ ಲಾಸ್ ಆಗುತ್ತದೆಂದು 250 ರೂಪಾಯಿ ಹಾಕಿದ್ದೇವೆ ಎಂದರು. ನೂರಕ್ಕೆ ತೊಂಭತ್ತು ಪರ್ಸೆಂಟ್ ಯಾವ ಕೊಳವೆ ಬಾವಿಯಲ್ಲಿ ನೀರು ಸಿಕ್ಕಲಿಲ್ಲ. ನೀರು ಸಿಕ್ಕಿದೆಯೆಂದೇ ದುಡ್ಡು ಡ್ರಾ ಮಾಡಿರುವುದು. ಈ ಬಗ್ಗೆ ಯಾವ ಸಮಿತಿ ತನಿಖೆ ಮಾಡಿದೆ? "ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ – ಎಂದಹಾಗೆ, ಈ ಬಗ್ಗೆ ಸಮರ್ಪಕವಾದಂಥ ವ್ಯವಸ್ಥೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ತಾವೇನು ತೀರ್ಮಾನ ಮಾಡಿದ್ದೀರಿ, ಹತ್ತು ಸಾವಿರ ಸಾಲ ಅಂತ ಹೇಳಿ, ಅದಕ್ಕಿಂತ ನೋ ವಾಟರ್, ನೋಮನಿ ಸ್ಕೀಮ್‌ನಲ್ಲಿ ನೀರು ಸಿಗದೇ ಇದ್ದರೂ ಸಹ ಬಿಲ್ಲುಗಳನ್ನು ಮಾಡಿಸಿಕೊಂಡಿರುವ ಪ್ರಕರಣಗಳು ನೂರಕ್ಕೆ ಇಪ್ಪತ್ತು ಪರ್ಸೆಂಟ್ ಇದೆ. ಮಾನ್ಯಮಂತ್ರಿಗಳು ಈ ಕಡೆ ಗಮನಿಸಬೇಕು. ಮತ್ತೊಂದು ನನ್ನ ಕ್ಷೇತ್ರದಲ್ಲಿ, ಯಾರೋ ಹೇಳುತ್ತಾ ಇದ್ದರು ಒಬ್ಬ ಕಾನ್‌ಸ್ಟೇಬಲ್‌ನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಎಂದು ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರು ಮಂತ್ರಿಯ್ನನು ಬದಲಾವಣೆ ಮಾಡುತ್ತಾನೆ. ಬೆಂಗಳೂರು ಜಿಲ್ಲೆಯಲ್ಲಿ ಲ್ಯಾಂಡ್ ಮಾಫಿಯಾ ಇದೆ. ಬೆಂಗಳೂರು ಜಿಲ್ಲೆಯಲ್ಲಿ ಎರಡು ಸಾವಿರ ಕೋಟಿಗೂ ಹೆಚ್ಚು ಲ್ಯಾಂಡ್ ಮಾಫಿಯಾ ಹಗರಣಗಳು ಇವೆ. ನಾನು ಪ್ರಶ್ನೆ ಮಾಡಿದ್ದೆ. ಟ್ಯಾಂಪರಿಂಗ್ ಮಾಡಿ, ಖಾತೆಗಳನ್ನು ಮಾಡಿಸಿ, ನನ್ನ ಕ್ಷೇತ್ರದಲ್ಲಿ ಜಮೀನುಗಳು ರಿಜಿಸ್ಟ್ರೇಷನ್ ಆಗುತ್ತವೆ. ಇದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಹಾಕಿದ್ದೆ. "ಇಲ್ಲ – ಇದ್ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಹೈಕೋರ್ಟಿನಲ್ಲಿ ಇಪ್ಪತ್ತೆಂಟು ಕೇಸ್ ಪೆಂಡಿಂಗ್ ಇದೆ. ನನ್ನ ಕ್ಷೇತ್ರದಲ್ಲಿ 1,500 ಎಕರೆ ಸರ್ಕಾರಿ ಭೂಮಿ, ಎರಡು ಸಾವಿರ ಕೋಟಿ ರೂಗೂ ಮೀರಿ ಬೆಲೆ ಬಾಳುತ್ತದೆ. ಇದರ ಹಿಂದೆ ಯಾರು ಇದ್ದಾರೆ? ಹಲವಾರು ಬಾರಿ ಮನವಿ ಮಾಡಿದೆ. ಜಿಲ್ಲಾಧಿಕಾರಿಗಳು ಇರಬಹುದು ರೆವಿನ್ಯೂ ಸೆಕ್ರಟರಿ ಇರಬಹುದು ಎಲ್ಲರಿಗೂ ಹೇಳಿದ್ದೇನೆ. ಇದನ್ನು ತನಿಖೆ ಮಾಡುವುದಕ್ಕೆ ಯಾರೂ ಸಿದ್ಧ ಇಲ್ಲ. ಇದನ್ನು ತನಿಖೆ ಮಾಡುವುದಕ್ಕೆ ಸಿ.ಬಿ.ಐ.ಗೆ ಕೊಡಬೇಕು. ಬಹಳಷ್ಟು ಸಾರಿ ಈ ಸದನದಲ್ಲಿ ಹೇಳುತ್ತಾರೆ. ಸಿ.ಬಿ.ಐ. ಗಿಂತ ನಾವು ಸಮರ್ಥರು ಎಂದು ಹೇಳುತ್ತಾರೆ. ಅದು ಯಾವ ಸಿ.ಬಿ.ಐ? ಇದೊಂದು ದೊಡ್ಡಹಗರಣ. ಬೆಂಗಳೂರು ಸುತ್ತಮುತ್ತ ಇರತಕ್ಕ ಲ್ಯಾಂಡ್ ಮಾಫಿಯಾ, ಹಣ ಲೂಟಿ ಮಾಡುತ್ತದೆ, ಸರ್ಕಾರದ ಆಸ್ತಿ ಲೂಟಿ ಮಾಡುತ್ತದೆ. ಈ ಬಗ್ಗೆ ಸರ್ಕಾರ ಬಹಳಷ್ಟು ಗಂಭೀರವಾಗಿ, ಬೆಂಗಳೂರು ಸುತ್ತಮುತ್ತ ಇರತಕ್ಕ ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡುವುದು ಈ ಸರ್ಕಾರದ ಜವಾಬ್ದಾರಿ ಇದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ಸದನದಲ್ಲಿ ಸಮರ್ಪಕವಾಗಿ ಉತ್ತರ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಸರ್ಕಾರದ ಆಸ್ತಿಯನ್ನು ಅಕ್ರಮವಾಗಿ ಪರಭಾರೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಇದರ ಬಗ್ಗೆ ನಿಮ್ಮ ಹತ್ತಿರ ಡೀಟೈಲ್ಸ್ ಇರಬೇಕಲ್ಲಾ. ಆ ಸರ್ವೆ ನಂಬರು, ವಿಸ್ತೀರ್ಣ ನಿಮ್ಮ ಹತ್ತಿರ ಇದ್ದರೆ,ದಯವಿಟ್ಟು ನಮ್ಮ ಕಂದಾಯ ಸಚಿವರ ಕಡೆ ಕೊಡಿ ಇಲ್ಲವೇ ನಮ್ಮ ಕಾರ್ಯದರ್ಶಿಗಳಿಗೆ ಕೊಡಿ. ತನಿಖೆ ಮಾಡಿಸೋಣ ಅದಕ್ಕೇನಂತೆ.

ಶ್ರೀ ಎ. ನಾರಾಯಣಸ್ವಾಮಿ : ಮತ್ತೆ 94(ಸಿ) 94 ನಮಗೆ ರಾಜ್ಯಪಾಲರ ಭಾಷಣ ಕೊಟ್ಟಿದ್ದಾರೆ. ಇಷ್ಟು ಲಕ್ಷ ಎಕರೆಗಳನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರು : ತಾವು ಹೇಳಿದ್ದು, ನನ್ನ ವಿಷಯ ಒಂದಿದೆ ಎಂದು. ಆದರೆ, ಏನೇನೋ ಮಾತನಾಡುತ್ತಿದ್ದೀರಿ. No, I am very sorry ಶೆಟ್ಟರ್‌ರವರೇ, ತಾವು ಮಾತನಾಡಿ. ಅವರು ಪುರಾಣ ಎಲ್ಲಾ ಹೇಳುತ್ತಿದ್ದಾರೆ. ತಾವು ಏನು ಹೇಳಿದ್ದು, ನನ್ನ ಒಂದು ಇನ್ಸಿಡೆಂಟ್ ಹೇಳಬೇಕು ಎಂದು ಆದರೆ, ಅದು ಬಿಟ್ಟು ಬೇರೆ ಯಾವುದೋ ಹೇಳುತ್ತಿದ್ದೀರಿ.

ಶ್ರೀ ಎ. ನಾರಾಯಣಸ್ವಾಮಿ : ನನ್ನ ಕ್ಷೇತ್ರದಲ್ಲಿ ನಾಲ್ಕು ಸಾವಿರ ಅರ್ಜಿಗಳು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪೆಂಡಿಂಗ್ ಇದೆ.

ಅಧ್ಯಕ್ಷರು : ತಾವು, ತಮ್ಮ ಪರ್ಸನಲ್ ಇನ್ಸಿಡೆಂಟ್ ಇದೆ. ಅದನ್ನು ಹೇಳಬೇಕೆಂದು ಹೇಳಿದ್ದು. ಅದು ಹೇಳಿ ಮುಗಿಸಿ.

ಶ್ರೀ ಎ. ನಾರಾಯಣಸ್ವಾಮಿ : 94(ಸಿ) ರಾಜ್ಯದಲ್ಲಿ ಲಕ್ಷಾಂತರ ಎಕರೆ ರೆಗ್ಯುಲರೈಸ್ ಮಾಡಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಒಂದೂ ರೆಗ್ಯೂಲರೈಸ್ ಮಾಡಿಲ್ಲವೆಂದು ಸರ್ಕಾರದಿಂದ ಉತ್ತರ ಬಂದಿದೆ. ಸರ್ಕಾರದಿಂದ ಏನಾದರೂ ಆದೇಶ ಹೊರಡಿಸಲಾಗಿದೆಯೇ? ವಿರೋಧ ಪಕ್ಷದ ಶಾಸಕರ ಕ್ಷೇತ್ರಗಳಲ್ಲಿ 94(ಸಿ) ಪ್ರಕಾರ ಯಾವುದೂ ಮಾಡಬಾರದು, 53ರ ಪ್ರಕಾರ ಯಾವುದೂ ಹಕ್ಕುಪತ್ರ ಕೊಡಬಾರದೆಂದು ಆದೇಶವಾಗಿದೆಯೇ? ಆದೇಶವಾಗಿ, ಅದರಂತೆ ತೀರ್ಮಾನ ಕೈಗೊಂಡಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ಸಮಿತಿಗಳಿಗೆ ನೀವೇ ಅಧ್ಯಕ್ಷರಿದ್ದೀರಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಚಂದ್ರೇಗೌಡರಿಗೆ ನನ್ನ ಕ್ಷೇತ್ರದ ವಿಚಾರವನ್ನು ಗಮನಕ್ಕೆ ತಂದಿದ್ದೇನೆ. ಎಲ್ಲಾ ವಿಚಾರಗಳನ್ನು ಅಧ್ಯಕ್ಷರ ಗಮನಕ್ಕೆ ತಂದು, ದಾಖಲೆ ಪತ್ರಗಳನ್ನು ಕೊಟ್ಟಿದ್ದೆ. ನಿಮ್ಮ ಸೆಕ್ರಟರಿಯ ಆ ಪ್ರೊಸೀಡಿಂಗ್ಸ್ ಯಾವರೀತಿಯಾಗಿ ಆಗಿರುತ್ತದೆಂಬುದನ್ನೂ ಹೇಳಿದ್ದೇನೆ. ಅಧ್ಯಕ್ಷರು ಪರಿಶೀಲನೆ ಮಾಡಿ, ಉತ್ತರ ಕೊಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ. ಮತ್ತೆ ನಿನ್ನೆಯಲ್ಲ ಮೊನ್ನೆ ಆನೇಕಲ್‌ನಲ್ಲಿ ನಮ್ಮ ಪುರಸಭಾ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟಂತೆ ಒಂದು ಕೇಸ್ ದಾಖಲಾಗಿತ್ತು. ಆ ಕೇಸ್‌ನಲ್ಲಿ ಯಾರ ಹೆಸರುಗಳೂ ಇರಲಿಲ್ಲ. ನಡಾವಳಿ ಪುಸ್ತಕ ಇಲ್ಲವೆಂದು, ಕೇಸ್ ದಾಖಲಾಗಿತ್ತು. ನಾನು ಬೆಂಗಳೂರಿಗೆ ಸದನಕ್ಕೆ ಬರಬೇಕಾಗಿತ್ತು, ಆ ಸಂದರ್ಭದಲ್ಲಿ ಒಂದು ಫೋನ್ ಬಂತು. ನಡವಳಿಕೆ ಪುಸ್ತಕ ಇಲ್ಲ ಅಂತ ಬಿ.ಜೆ.ಪಿ. ಕಾರ್ಯಕರ್ತರನ್ನೆಲ್ಲಾ ಅರೆಸ್ಟ್ ಮಾಡುತ್ತಿದ್ದಾರೆ. ನಾನು ಲಾ ಅಂಡ್ ಆರ್ಡರ್ ಸಬ್ ಇನ್‌ಸ್ಪೆಕ್ಟರಿಗೆ ಮೊಬೈಲ್ ಮಾಡಿ, ಮೊಬೈಲ್ ಕೊಡಪ್ಪ ನಮ್ಮ ಕಾರ್ಯಕರ್ತರಿಗೆ ಎಂದೆ. ಅದಕ್ಕೆ ಅವರು ನಾನು ಮೊಬೈಲ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ನಾನು ಮೊಬೈಲ್‌ನಲ್ಲಿ ಮಾತನಾಡುವುದಿಲ್ಲ. ಮತ್ತೊಂದು ಸಾರಿ ಕೊಡಪ್ಪ ಎಂದೆ. ಆದರೆ, ಅವರು ಮೊಬೈಲ್ ರಿಸೀವ್ ಮಾಡಿಕೊಳ್ಳಲಿಲ್ಲ. ನಾನು, ನನ್ನ ಕ್ಷೇತ್ರದ. ವೃತ್ತ ನಿರೀಕ್ಷಕರಿಗೆ.....

ಅಧ್ಯಕ್ಷರು : ಮುಗಿಸಿ ಬೇಗ. ಮೊಬೈಲ್ ವಿಷಯ ಇಲ್ಲಿ ಏಕೆ ಬೇಕು?

ಶ್ರೀ ಎ. ನಾರಾಯಣಸ್ವಾಮಿ : ನಾನು ಏಕೆ ಸ್ಟೇಷನ್‌ಗೆ ಹೋಗಿದ್ದೆ ಎಂಬುದು ಸಮಾಜಕ್ಕೆ ಜನತೆಗೆ ಗೊತ್ತಾಗಬೇಕಲ್ಲಾ ಅಧ್ಯಕ್ಷರೇ ಒಬ್ಬ ಶಾಸಕರು ಸ್ಟೇಷನ್‌ಗೆ ಏಕೆ ಹೋದ? ಇದು ಜನಕ್ಕೆ ಗೊತ್ತಾಗಬೇಕಲ್ಲಾ. ಸರ್ಕಲ್ ಇನ್‌ಸ್ಪೆಕ್ಟರಿಗೆ ಫೋನ್ ಮಾಡಿದೆ. ಅದಕ್ಕೆ ಅವರು ಸಾರ್ ನಾನು ಇನ್‌ಫೋಸಿಸ್ ಬಂದೋಬಸ್ತ್‌ನಲ್ಲಿದ್ದೇನೆ. ಡಿ.ವೈ.ಎಸ್.ಪಿ. ಯವರೂ ಇನ್‌ಫೋಸಿಸ್ ಬಂದೋಬಸ್ತ್‌ನಲ್ಲಿದ್ದೇನೆ ಎಂದು ಹೇಳಿದರು. ತಾವು ಇನ್‌ಸ್ಪೆಕ್ಟರ ಹತ್ತಿರವೇ ಮಾತಾಡಿ ಎಂದರು. ಆ ವಿಚಾರ ಚರ್ಚೆ ಮಾಡಿ, ಸಂಬಂಧಪಟ್ಟ ದಾಖಲೆ ತಮ್ಮ ಹತ್ತಿರ ಇದ್ದರೆ, ಕಾನೂನು ಪ್ರಕಾರ ಯಾರನ್ನು ಬೇಕಾದರೂ ಅರೆಸ್ಟ್ ಮಾಡಿ ಎಂದು ಹೇಳಿದ್ದೆ. ಫೋನ್ ಯಾರೂ ಮಾಡಲಿಲ್ಲ. ನಾನು ಆನೇಕಲ್ ಕ್ಷೇತ್ರಕ್ಕೆ ಹೋದೆ. ಠಾಣೆಗೆ ಹೋಗಿ, ತಮ್ಮ ಹತ್ತಿರ ಏನು ದಾಖಲೆ ಇದೆಯಪ್ಪ ಯಾರಾದರೂ ಕಂಪ್ಲೇಂಟ್ ಮಾಡಿರತಕ್ಕ ಸ್ಟೇಟ್‌ಮೆಂಟ್ ಇದೆಯಾ, ಆ ದಾಖಲೆಗಳನ್ನು ತೋರಿಸಿ. ನಾನೇ, ನಮ್ಮ ಕಾರ್ಯಕರ್ತರನ್ನು ಕರೆಸಿ, ಸರಂಡರ್ ಮಾಡಿಸುತ್ತೇನೆ ಎಂದೆ. ನಮ್ಮ ದಾಖಲೆ ಐ.ಜಿ.ಯವರ ಹತ್ತಿರ ಇದೆ. ಎಂದು ಹೇಳಿ-ಒಬ್ಬ ಶಾಸಕನಾಗಿ, ನನಗೇ ಪಿಸ್ತೂಲು ತೋರಿಸುತ್ತಾರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಯಾರಾದರೂ ಶಾಸಕರು ಪೋಲೀಸ್ ಸ್ಟೇಷನ್‌ಗೆ ಹೋಗುತ್ತಾರೆಯೇಸ್ತ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೀವು ಹೋಗಿರಲಿಕ್ಕಿಲ್ಲ. ಆದರೆ, ಇವತ್ತು ರಾಜ್ಯದಲ್ಲಿ ಪರಿಸ್ಥಿತಿ ಆ ರೀತಿಯಾಗಿದೆ. ಶಾಸಕರೂ ಹೋಗತಕ್ಕ ಪರಿಸ್ಥಿತಿಯಾಗಿದೆ.

ಶ್ರೀ ಎ. ನಾರಾಯಣಸ್ವಾಮಿ : ಪೋಲೀಸ್ ಇಲಾಖೆಯ ಪರಿಸ್ಥಿತಿ ರಾಜ್ಯದಲ್ಲಿ ಈ ರೀತಿ ಇದೆ. ದಾಖಲೆ ಕೊಡಿ ಎಂದು ಕೇಳಿದೆ, ಐ.ಜಿ. ಹತ್ತಿರ ನನ್ನ ದಾಖಲೆ ಇದೆ. ನಿನಗೇಕೆ ತೋರಿಸಬೇಕು ಎಂದರು. ನಾನು ಒಬ್ಬ ಜನಪ್ರತಿನಿಧಿ, ವಿಚಾರಿಸುವುದಕ್ಕೆ ನನಗೆ ಹಕ್ಕಿದೆ ಎಂದು ಹೇಳಿದರೆ ಆ ಇನ್‌ಸ್ಪೆಕ್ಟರ್ ನನ್ನನ್ನು ಸುಟ್ಟುಬಿಡುತ್ತೇನೆ ಎಂದು ಹೇಳಿದ ನೀವು ಸ್ಟೇಷನ್ನಿಂದ ಹೊರಗಡೆ ಹೋಗಬೇಕು ಎಂದರು. ಇವತ್ತು ಪರಿಸ್ಥಿತಿ ಗಂಭೀರವಾಗಿ ಇದೆ. ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಈ ರೀತಿಯಾದರೆ, ಒಬ್ಬ ಶಾಸಕನ ಪರಿಸ್ಥಿತಿ ಈ ರೀತಿಯಾದರೆ, ಸಾಮಾನ್ಯ ನಾಗರೀಕನ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಅಧ್ಯಕ್ಷರು ಮತ್ತು ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಎ. ಕೃಷ್ಣಪ್ಪ : ಇಲ್ಲಿ ಶಾಸಕರು ಬಹಳ ಜನ ಇದ್ದಾರೆ. ಈ ಮನೆಯಲ್ಲಿ 224 ಜನ, ಆ ಮನೆಯಲ್ಲಿ 75 ಜನ ಇದ್ದಾರೆ. ಇಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಇದ್ದಾರೆ. ನೀವೇನು ಸ್ಪೆಷಲ್ ಸದಸ್ಯರಲ್ಲ, ನಾನೂ ಕೂಡ ಸ್ಪೆಶಲ್ ಸದಸ್ಯನಲ್ಲ. ಆದರೆ ನಿಮ್ಮ ಬಾಯಲ್ಲಿ ಏನು ಮಾತುಗಳು ಬಂದುವು ಮತ್ತು ಎಂಥ ಬಂಗಾರದ ಮುತ್ತುಗಳು ಉದುರಿದುವು ಎಂಬುದನ್ನು ಮೊದಲು ಹೇಳಿ. He is also a human being. Sub-Inspector is not a super man. Sub-Inspectór is a human being.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಅವರಿಗೆ ಯಾವ ರೀತಿ ರಕ್ಷಣೆ ಕೊಡಬೇಕು ಎಂದು ಆ ಮೇಲೆ ಹೇಳಿ. ಮೊದಲು ಅವರು ಏನು ಹೇಳಬೇಕೆಂದಿದ್ದಾರೋ ಅದನ್ನು ಹೇಳಲಿ. ಅವರು ಮಾತನಾಡಿದ ಮೇಲೆ ನೀವು ಉತ್ತರ ಕೊಡಿ

Sri A. Krishnappa : Don't misuse this House.

ಶ್ರೀ ಎ. ನಾರಾಯಣ ಸ್ವಾಮಿ : ನಾನು ಮಿಸ್‌ಯೂಸ್ ಮಾಡುತ್ತಾ ಇಲ್ಲ. ನಾನು ಏನು ಹೇಳಬೇಕೋ ಅದನ್ನು ಇಲ್ಲಿ ಹೇಳಬೇಕಲ್ಲವೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಆ ರೀತಿಯಾಗಿ ಒಬ್ಬ ಮಂತ್ರಿಯಾಗಿ ಹೀಗಿ ಇಂಟರ್‌ವೆನ್‌ಶನ್ ಮಾಡುವುದು ಸರಿಯೇ? ಅವರಿಗೆ ಅವರ ಮಾತುಗಳನ್ನು ಹೇಳಲು ಅವಕಾಶ ಕೊಡಿ. ಆ ಮೇಲೆ ನಿಮಗೆ ಏನು ಹೇಳಬೇಕೋ ಅದನ್ನು ಹೇಳಿ. ನಿಮ್ಮ ಹತ್ತಿರ ಇರುವ ಮಾಹಿತಿಗಳನ್ನು ಹೇಳಿ.

ಅಧ್ಯಕ್ಷರು : ಮಾನ್ಯ ಸ್ವಾಮಿಯವರು ತಮ್ಮ ಮಾತುಗಳನ್ನು ಮುಗಿಸಿ. ನೀವು ಐದು ನಿಮಿಷವೆಂದು ಹೇಳಿ ಅರ್ಧಗಂಟೆ ಮೇಲೆ ಮಾತನಾಡಿದ್ದೀರಿ. You must understand my patience also.

ಶ್ರೀ ಆರಗ ಜ್ಞಾನೇಂದ್ರ : ಅವರು ಒಬ್ಬ ದಲಿತ ವರ್ಗದಿಂದ ಬರುವ ಶಾಸಕರು. ಒಬ್ಬ ಅಧಿಕಾರಿ ಒಬ್ಬ ಶಾಸಕರಿಗೆ ಪಿಸ್ತೂಲ್ ಹಿಡಿದುಕೊಂಡು ಹೆದರಿಸುತ್ತಾರೆಂದರೆ ಅದನ್ನು ಹೇಳುವುದು ಬೇಡವೇ?

ಅಧ್ಯಕ್ಷರು : ಅವರು ದಲಿತ ಶಾಸಕರು ಎಂಬುದು ನನಗೂ ಗೊತ್ತಿದೆ. ನೀವು ನನಗೆ ಹೊಸತಾಗಿ ಹೇಳಬೇಕಾಗಿಲ್ಲ. ಅವರು ಹೇಳುವುದನ್ನು ಹೇಳಿ ಆಯಿತಲ್ಲವೇ? ಸುಮಾರು 40 ನಿಮಿಷಗಳ ಕಾಲ ಮಾತನಾಡಿದ್ದಾರೆ.

Sri D.B. Chandre Gowda : Everybody should have equal rights. ಎಲ್ಲರೂ ಶಾಸಕರೇ ಯಾತಕ್ಕೆ ನೀವು ಹೇಳುತ್ತೀರಿ ಅಂದರೆ ಅದು ನಿಮ್ಮ ಮನಸ್ಸಿನಲ್ಲಿ ಇದೆ. ಆದ ಕಾರಣ ಅದು ಪ್ರತಿಧ್ವನಿಯಾಗುತ್ತದೆ.

ಶ್ರೀ ಜಗದೀಶ ಶೆಟ್ಟರ್ : ನೀವು ಬೆಳಗ್ಗಿನಿಂದ ಸಾಯಂಕಾಲದ ವರೆಗೂ ಅದನ್ನೇ ಮಾತನಾಡುತ್ತೀರಿ. ಅವರಿಗೂ ಹೇಳಲು ಅವಕಾಶ ಕೊಡಿ.

ಅಧ್ಯಕ್ಷರು : ನೀವು ದಯವಿಟ್ಟು ಮುಗಿಸಿ..

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನ ಮೂಲ ಪ್ರಶ್ನೆ ಇದೆ. ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮೇಲೆ, ಎಸ್‌ಪಿ, ಡಿವೈಎಸ್‌ಪಿ ಕುಳಿತುಕೊಂಡು ನಮ್ಮ ಕಡೆಯಿಂದ ತಪ್ಪಾಗಿದೆ ಎಂದು ಹೇಳಿ, ಎಫ್‌ಐಆರ್ ಆಗಿ ಅಟ್ರಾಸಿಟೀಸ್ ಕೇಸ್ ಬುಕ್ ಆಗಿ, ಮತ್ತೆ ಅದೇ ಸಬ್‌ಇನ್ಸ್‌ಪೆಕ್ಟರ್ ಕಂಟಿನ್ಯೂ ಆಗುತ್ತಾ ಇದ್ದಾನೆ. ಕೆಲಸ ನಿರ್ವಹಿಸುತ್ತಿದ್ದಾನೆ. ಆತನ ಮೇಲೆ ಎಫ್‌ಐಆರ್ ಇಟ್ಟುಕೊಂಡು ಒಬ್ಬ ಶಾಸಕನಿಗೆ ಪಿಸ್ತೂಲ್ ತೋರಿಸಿರುವುದನ್ನು ಇಡೀ ಇಲಾಖೆಯು ಒಪ್ಪಿಕೊಂಡು ಯಾವರೀತಿಯಲ್ಲಿ ಸರ್ಕಾರ ಮುಂದುವರಿಸುತ್ತಿದ್ದಾರೆಂಬುದು ನನಗೆ ಗೊತಾಗುತ್ತಿಲ್ಲ. ಇದನ್ನು ತಾವು ಗಂಭೀರವಾಗಿ ಯೋಚನೆ ಮಾಡಬೇಕು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆತನು ಇವೊತ್ತು ಸರ್ವಿಸ್‌ನಲ್ಲಿ ಕಂಟಿನ್ಯೂ ಆಗುತ್ತಾ ಇದ್ದಾನೆ. ನಾವು ಮೇಲಧಿಕಾರಿಗಳ ಜೊತೆಗೆ ಮಾತನಾಡಿದ್ದೇವೆ. ಅವರು ಮರುದಿನವೇ ಸಸ್ಪೆಂಡ್ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಆಗಿಲ್ಲ. ಈ ರೀತಿಯಲ್ಲಿ ಒಬ್ಬ

ಶಾಸಕರ ಮೇಲೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಪಿಸ್ತೂಲು ತೋರಿಸಿ ಗುಂಡು ಹಾರಿಸುತ್ತೇನೆ. ಕೊಂದು ಹಾಕುತ್ತೇನೆ ಎಂದರೆ, ಅಂಥವನ ಮೇಲೆ ಇಲ್ಲಿಯವರೆಗೆ ಯಾವ ಆ್ಯಕ್ಷನ್ ತೆಗೆದುಕೊಂಡಿಲ್ಲ. ಆದುದರಿಂದ ಸರಕಾರ ಯಾವರೀತಿಯಲ್ಲಿ ನಡೆಯುತ್ತಿದೆ ಎಂಬುದನ್ನು ಹೇಳುತ್ತಿದ್ದಾರೆ.

Sri A. Krishnappa : That also goes together with what is our conduct with the Sub-Inspector. He is also a human being.

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಮತ್ತೊಬ್ಬ ಸಹೋದ್ಯೋಗಿ ಹೇಳುತ್ತಾ ಇದ್ದರು. ಎಫ್‌ಐಆರ್ ಹಾಕಿದರೆ ಪ್ರತಿಭಟನೆ ಮಾಡದೇನೇ ಎಫ್.ಐ.ಆರ್. ಹಾಕುತ್ತಾರೆ ಎಂದು ಹೇಳಿ. ಅದೇ ಘಟನೆ ನನ್ನ ಕ್ಷೇತ್ರದಲ್ಲಿಯೂ ನಡೆದಿದೆ. ಯಾರು ಸಮಾಜದ ಪರವಾಗಿ ಸೊಲ್ಲೆತ್ತುತ್ತಾರೆ, ಧ್ವನಿ ತೆಗೆಯುತ್ತಾರೆ, ಅಂಥವರ ಮೇಲೆ ಎಫ್‌ಐಆರ್ ಹಾಕುತ್ತಾರೆ ಸ್ಟೇಷನ್‌ನಲ್ಲಿ ಅಂದರೆ, ಪೋಲೀಸ್ ಇಲಾಖೆಯು ಯಾರ ಕೈಕೆಳಗೆ ಕೆಲಸ ಮಾಡುತ್ತಾ ಇದೆ?

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರು ತಮ್ಮ ಮಾತನ್ನು ಪ್ರಾರಂಭ ಮಾಡಿ. ಅವರು ತಮ್ಮ ಮಾತನ್ನು ನಿಲ್ಲಿಸುವುದಿಲ್ಲ. He won't stop. I know that. ಅವರಿಗೆ ನಾನು ಅವಕಾಶ ಕೊಡದಿದ್ದರೆ ಸರಿಹೋಗುತ್ತಿತ್ತು.

ಶ್ರೀ ಎ. ನಾರಾಯಣ ಸ್ವಾಮಿ : ಇವೊತ್ತು ವಿರೋಧ ಪಕ್ಷದ ಶಾಸಕರು ಎನ್ನುವುದಕ್ಕಿಂತ ಒಬ್ಬ ಚುನಾಯಿತ ಸದಸ್ಯ, ಜನಪ್ರತಿನಿಧಿ ಯಾವುದೇ ಕಚೇರಿಗೆ ಹೋದಾಗ ಅಧಿಕಾರಿಗಳು ಯಾವ ರೀತಿಯಲ್ಲಿ ವರ್ತನೆ ಮಾಡಬೇಕು, ಯಾವರೀತಿಯಲ್ಲಿ ನಡೆದುಕೊಳ್ಳಬೇಕು, ಎಂಬಿತ್ಯಾದಿ ಶಿಷ್ಟಾಚಾರಗಳ ಬಗ್ಗೆ ಸರಕಾರದವರು ಗಂಭೀರವಾಗಿ ಚಿಂತನೆ ಮಾಡಬೇಕು. ಹಾಗೂ ಸಮರ್ಪಕವಾದ ಉತ್ತರವನ್ನು ಕೊಡುತ್ತಾರೆಂದು ನಿರೀಕ್ಷೆ ಮಾಡುತ್ತಾ ನನಗೆ ರಾಜ್ಯಪಾಲರ ಭಾಷಣದ ವಿಚಾರದಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಆನೇಕಲ್ ಮೇಲೆ ಬಹಳ ಜನ ಮಿನಿಸ್ಟರ್‌ಗಳಿಗೆ ಕಣ್ಣು ಇದೆ. ಹಾಗಾಗಿ ಹೀಗೆಲ್ಲಾ ಆಗುತ್ತಿದೆ. ನಾನು ಇಂದು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಕೆಲವೊಂದು ವಿಚಾರಗಳನ್ನು ಹೇಳಲು ನನಗೆ ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಪ್ರಸ್ತಾಪಿಸಲು ಬಹಳಷ್ಟು ವಿಚಾರಗಳು ಇವೆ. ಆದರೆ, ಸಮಯದ ಅಭಾವವಿದೆ ಎಂಬುದು ನನಗೂ ಅರ್ಥವಾಗುತ್ತಾ ಇದೆ. ಆದುದರಿಂದ ಕೆಲವೊಂದು ಮುಖ್ಯವಾದ ವಿಚಾರಗಳ ಬಗ್ಗೆ ಮಾತ್ರ ನಾನು ಮಾತನಾಡಬಯಸುತ್ತೇನೆ. ಇವೊತ್ತು ಮಾನ್ಯ ರಾಜ್ಯಪಾಲರ ಭಾಷಣ, ನಮ್ಮ ಸಂವಿಧಾನದ ರೀತಿಯಲ್ಲಿ ಪಾರ್ಲಿಮೆಂಟರಿ ಅಫೈರ್ಸ್ ಇದರ ಮುಖಾಂತರ ಏನೊಂದು ಸಂಪ್ರದಾಯವಿದೆ, ಸರಕಾರದ ಗೊತ್ತುಗುರಿ, ನೀತಿನಡಾವಳಿಗಳನ್ನು ಆ ವರ್ಷ ಮತ್ತು ಬರುವಂಥ ದಿವಸಗಳಲ್ಲಿ ಅದನ್ನು ಮಾನ್ಯ ರಾಜ್ಯಪಾಲರ ಮುಖಾಂತರ ಹೇಳುವಂಥಾದ್ದು. ಆದರೆ ಈ ಸಲದ ರಾಜ್ಯಪಾಲರ ಭಾಷಣವನ್ನು ನಾವು ಅವಲೋಕನ ಮಾಡಿದರೆ, ನಾಲ್ಕು ವರ್ಷದ ಕೆಲವೊಂದು ಅಂಕಿಸಂಕಿಗಳನ್ನು ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ, ಅನ್ನುವಂಥ ಫ್ಯಾಕ್ಟ್‌ಗಳನ್ನು ಮುಂದೆ ಏನು ಮಾಡುತ್ತೇವೆ ಎಂಬುದನ್ನೂ ಹೇಳಿಲ್ಲ. ಅದನ್ನು ಬಿಟ್ಟು ಇಲ್ಲಿಯವರೆಗೆ ಅದನ್ನು, ಇದನ್ನು ಮಾಡಿದ್ದೇವೆಂದು ಹೇಳುವ ಪಟ್ಟಿ ಏನಿದೆಯಲ್ಲಾ, ಅದನ್ನು ಮಾನ್ಯ ರಾಜ್ಯಪಾಲರ ಮುಖಾಂತರ ಹೇಳಿಸಿದ್ದಾರೆ. ನಿಜವಾಗಿಯೂ ಸಂಪ್ರದಾಯದ ಪ್ರಕಾರವಾಗಿ

ರಾಜ್ಯಪಾಲರ ಭಾಷಣ ಇರಬೇಕಾಗಿತ್ತು. ಆ ರೀತಿಯಾದಂಥ ಭಾಷಣ ಇದಲ್ಲ. ನಿಜವಾಗಿಯೂ ಕೂಡ ರಾಜ್ಯಪಾಲರಿಗೆ ಅಪಮಾನ ಮಾಡುವಂಥ ಭಾಷಣ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವೊತ್ತು ರಾಜ್ಯದಲ್ಲಿರುವಂಥ ಬರಗಾಲದ ಪರಿಸ್ಥಿತಿ. ಈಗಾಗಲೇ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಮತ್ತು ರಾಜ್ಯ ಸರಕಾರ ಕೈಗೊಂಡ ಕ್ರಮಗಳು, ಸರಕಾರ ಇಲ್ಲಿಯವರೆಗೆ ಕೈಗೊಂಡ ಹಾಗೂ ಮುಂದೆ ಕೈಗೊಳ್ಳಬಹುದಾದ ವಿಷಯಗಳೇನು, ಇದರ ಬಗ್ಗೆ ಸಾಕಷ್ಟು ಚರ್ಚೆಗಳು ಆಗಿದ್ದಾವೆ. ಒಂದು ಮಾತನ್ನು ಇಲ್ಲಿ ಹೇಳ ಬಯಸುತ್ತೇನೆ, ಇದು ಕೇವಲ ಘೋಷಣೆಗಳನ್ನು ಹೇಳುವಂಥ ಕೇವಲ ಪ್ಯಾಕೇಜ್‌ಗಳನ್ನು ಅನೌನ್ಸ್ ಮಾಡುವಂಥ ಸರಕಾರ ಎಂದು ಹೇಳಬೇಕಾಗುತ್ತದೆ. ಇವರಲ್ಲಿ ಪ್ರತಿಯೊಂದಕ್ಕೂ ಪ್ಯಾಕೇಜ್. ಯಾವುದೇ ಕಾಮಗಾರಿಗಳಲ್ಲಿ ಪ್ಯಾಕೇಜ್, ಯಾವುದೇ ಬ್ರಿಡ್ಜ್ ಕಟ್ಟುವುದರಲ್ಲಿಯೂ ಪ್ಯಾಕೇಜ್. ಪ್ಯಾಕೇಜ್ ಟೆಂಡರ್. ಇಂಡಿಪೆಂಡೆಂಟ್ ಟೆಂಡರ್ ಇಲ್ಲ. ಅದೇ ರೀತಿಯಲ್ಲಿ ಕೆಲವೊಂದು ಸಮಸ್ಯೆಗಳಿಗೆ ಪ್ಯಾಕೇಜ್ ಮುಖಾಂತರ ವಿಶೇಷ ಪ್ಯಾಕೇಜ್ ಮುಖಾಂತರ ಪರಿಹಾರ ಎನ್ನುವಂಥಾದ್ದು ಆದರೂ ಕೂಡ ಯಾವುದಕ್ಕೂ ಪರಿಹಾರ ಸಿಗಲಿಲ್ಲ. 880 ಕೋಟಿ ರೂ.ಗಳಿಗೆ ರೈತರ ವಿಶೇಷ ಪ್ಯಾಕೇಜ್, ರಾಜ್ಯದಲ್ಲಿ ಬರಗಾಲವಿದೆ. ಬಡ್ಡಿ ಮನ್ನಾ. ಪಂಪ್‌ಸೆಟ್‌ಗಳ ಬಾಕಿ ಮನ್ನಾ. ಎಂದೆಲ್ಲಾ ಹೇಳಿದರು. ಆದರೆ ಇವರ ಪ್ಯಾಕೇಜ್‌ಗಳ ಪರಿಹಾರ ನಮ್ಮ ರೈತರಿಗೆ ಇದುವರೆಗೂ ಸಿಗಲಿಲ್ಲ. ಆ ಮೇಲೆ ಬಳ್ಳಾರಿ ಪ್ಯಾಕೇಜ್. ಮಾನ್ಯ ಎಸ್.ಎಂ. ಕೃಷ್ಣರವರು ಮೊದಲನೇ ವರ್ಷದಲ್ಲಿ ಮುಖ್ಯಮಂತ್ರಿ ಅಧಿಕಾರವನ್ನು ತೆಗೆದುಕೊಂಡು ರಾಜ್ಯಪಾಲರ ಮುಖಾಂತರ ಏನು ಭಾಷಣವನ್ನು ಹೇಳಿಸಿದರು, ಆ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಗೊಂದು ವಿಶೇಷ ಪ್ಯಾಕೇಜ್. ಏಕೆಂದರೆ ಅವರ ಪಕ್ಷದ ನಾಯಕಿಯಾದಂಥ ಶ್ರೀಮತಿ ಸೋನಿಯ ಗಾಂಧಿಯವರು, ಅಲ್ಲಿಂದ ಆರಿಸಿ ಬಂದಿದ್ದರು. ಅವರು ಅಲ್ಲಿಂದ ಆರಿಸಿ ಬಂದು ಬಳ್ಳಾರಿ ಜನತೆಯ ಋಣವನ್ನು ತೀರಿಸಬೇಕಾಗಿತ್ತು. ಅದಕ್ಕಾಗಿ ರಾಜ್ಯ ಸರಕಾರದವರು ಸ್ಪೆಶಲ್ ಪ್ಯಾಕೇಜ್ ಕೊಡುತ್ತಾರೆಂದು ಹೇಳಿ, ಬಳ್ಳಾರಿ ಜನರಿಗೆ ಲಾಭವಾಗಲಿ ಎಂದು ನಾವು ಹಾರೈಸಿದೆವು. ಅದು 3300 ಕೋಟಿ ರೂ.ಗಳ ಪ್ಯಾಕೇಜ್ ಬಳ್ಳಾರಿ ಜಿಲ್ಲೆಗೆ ಆಗಿತ್ತು. ಅದರಲ್ಲಿ 2100 ಕೋಟಿ ರೂ.ಗಳು 500 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಕೇಂದ್ರ. ಹಾಗಾದರೆ ಅದಕ್ಕೆ ಎಷ್ಟು ಖರ್ಚು ಆಗಿದೆ ಎನ್ನುವುದು ಸರಕಾರದಲ್ಲಿ ವಿವರ ಇದೆಯೇ? ನಾಲ್ಕು ವರ್ಷಗಳಲ್ಲಿ ಒಂದು ನೂರು ಕೋಟಿ ರೂ.ಗಳು ಕೂಡ ಖರ್ಚಾಗಿಲ್ಲ. ಒಟ್ಟು 3300 ಕೋಟಿ ರೂ.ಗಳು ಎಂದಿದ್ದರೂ ಇದುವರೆಗೂ 5–10 ಕೋಟಿ ರೂ.ಗಳನ್ನು ಕೂಡ ಅವರು ಖರ್ಚು ಮಾಡಿಲ್ಲವೆಂಬ ಸಂಶಯ ನಮಗಿದೆ. ಅಂದರೆ ಇದರ ಅರ್ಥ ಏನು? ಥರ್ಮಲ್ ಪ್ಲ್ಯಾಂಟ್ ಎಲ್ಲಿಗೆ ಬಂತು? ಪರಿಸ್ಥಿತಿಯು ಎಲ್ಲಿ ಹೋಗಿದೆ? ಇಷ್ಟು ಹೊತ್ತಿಗೆ ಅದರ ಉದ್ಘಾಟನೆಯಾಗಬೇಕಾಗಿತ್ತು. ಆದರೆ ಇನ್ನೂ ಆಗಿಲ್ಲ. ಮುಂದೆ ಮಲೆನಾಡು ಪ್ರದೇಶಾಭಿವೃದ್ಧಿಗೆ 60 ಕೋಟಿ ರೂ.ಗಳ ಪ್ಯಾಕೇಜ್. ಅದರ ಹಣವೂ ಕೂಡ ಬಿಡುಗಡೆಯಾಗಲಿಲ್ಲ. ಇನ್ನು ಮಂಡ್ಯ ಜಿಲ್ಲೆಗೆ 300 ಕೋಟಿ ರೂ.ಗಳ ಪ್ಯಾಕೇಜ್. ಆಗ ನಾವು ನೀವು ಮಂಡ್ಯದ ಮುಖ್ಯಮಂತ್ರಿಯವರಲ್ಲಾ ಕರ್ನಾಟಕದ ಮುಖ್ಯಮಂತ್ರಿಯವರು ಎಂದು ಟೀಕೆ ಮಾಡಿದ್ದೆವು. ಹೋಗಲಿ ಅದಾದರೂ ಖರ್ಚಾಗಿದೆಯೇ? ಇಲ್ಲ. ಮಂಡ್ಯದ ಜನರಿಗೂ ಈ ಮೋಸ. ಕರ್ನಾಟಕದ ಜನರಿಗೂ ಮೋಸ. ಮುಂದೆ ಕೊಡಗು ಪ್ಯಾಕೇಜ್ ಎಂದು ಹೇಳಿದರು. ಮಾನ್ಯ ಅಪ್ಪಚ್ಚು ರಂಜನ್‌ರವರು ಅದನ್ನು ಪ್ರಸ್ತಾಪ ಮಾಡಿ ಇನ್ನೂ ಏನೂ ಇಲ್ಲವೆಂದು ಹೇಳಿದರು. ಕೊಡಗು ಪ್ಯಾಕೇಜ್‌ನ ಸುದ್ದಿಯೇ ಇಲ್ಲ. ಬಾಗಲಕೋಟೆಗೆ ಮಾನ್ಯ

ಮುಖ್ಯಮಂತ್ರಿಗಳು ಹೋದರು. ದೊಡ್ಡ ಸಾರ್ವಜನಿಕ ಸಭೆಯಲ್ಲಿ ಇವರು ಅನೌನ್ಸ್ ಮಾಡಿ ಬಿಟ್ಟರು. ಬಾಗಲಕೋಟೆಯ ಪುನರ್‌ವಸತಿ ಸಲುವಾಗಿ, 500 ಕೋಟಿ ರೂ.ಗಳ ಪ್ಯಾಕೇಜ್ ಎಂದು ಹೇಳಿದರು. ಅದಕ್ಕೆ ಹತ್ತು ಕೋಟಿ ರೂ.ಗಳೂ ಕೂಡ ಖರ್ಚಾಗಿಲ್ಲ. ನೀವು ಹಣ ಇಲ್ಲದೆ ಕೇವಲ ಘೋಷಣೆ ಮಾಡುತ್ತಿದ್ದೀರೋ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇನ್ನೊಂದು ನೇಕಾರರ ಸಮಸ್ಯೆಯ ವಿಚಾರ. ಅವರು ಬಹಳ ಕಷ್ಟದಲ್ಲಿದ್ದಾರೆ. ಅದರ ಬಗ್ಗೆ ನಾವು ಬಹಳ ಮಾತನಾಡಬೇಕಾಗುತ್ತದೆ. ಉತ್ತರ ಕರ್ನಾಟಕ ಭಾಗದ ಜಮಖಂಡಿ, ಇಳಕಲ್, ರಬಕವಿ, ಹುನಗುಂದ ಭಾಗಗಳಲ್ಲಿ ನೇಕಾರರು ಬಹಳ ಕಷ್ಟದಲ್ಲಿದ್ದಾರೆ. ನೇಕಾರರ ಸಲುವಾಗಿ ಒಂದು ವಿಶೇಷ ಪ್ಯಾಕೇಜ್. ಮಾನ್ಯ ರೇವಣ್ಣನವರ ಹೇಳಿಕೆ ದಿನಾನೂ ನಾನು ನೋಡುತ್ತೇನೆ, ಮಂತ್ರಿಗಳು ಇಲ್ಲೇ ಇದ್ದರು, ಅವರು ಎಲ್ಲಿ ಹೋದರು? ಹತ್ತಿರ ಹತ್ತಿರ 6 ತಿಂಗಳಿಂದ ಅವರ ಹೇಳಿಕೆ ನೋಡುವುದಕ್ಕೆ ಹತ್ತಿದ್ದೇನೆ, ರೇವಣ್ಣನವರದ್ದು, ಇವತ್ತು ಬಿಡುಗಡೆ, ಇವತ್ತು ಸಾಯಂಕಾಲ ಬಿಡುಗಡೆ ನೇಕಾರರ ಪ್ಯಾಕೇಜ್, ನಾವೂ ನೋಡುವುದಕ್ಕೆ ಹತ್ತಿದ್ದೇವೆ, ಏನಪ್ಪ ಏನು ವಿಶೇಷ ಇದೆ, ಪಾಪ ಸಾಯುವುದಕ್ಕೆ ಹತ್ತಿದ್ದಾರೆ, ನೇಕಾರರು ಮಾಡಿಕೊಂಡಿದ್ದಾರೆ, ಉಪವಾಸ ಬಿದ್ದಿದ್ದಾರೆ, ಮೊನ್ನೆ ರಬಕವಿ ಬನಹಟ್ಟಿಗೆ ಹೋಗಿದ್ದೆ ಆ KSHDC Office ಮುಂದೆ ನೂರಾರು ಉಪವಾಸ ಕೂತಿದ್ದಾರೆ. ಹಾಗಾದರೆ ವಿಶೇಷ ಪ್ಯಾಕೇಜ್ ಅಂದರೆ ರೇವಣ್ಣನವರು ಬೆಳಗಿನಿಂದಲೂ ಕ್ರಿಕೆಟ್ ಕಾಮೆಂಟರಿ ಮಾಡುತ್ತಾರೆ. ಇವತ್ತು ಈಗ, ಮಧ್ಯಾಹ್ನ, ಸಾಯಂಕಾಲ, ನಾಳೆ ಬೆಳಿಗ್ಗೆ ಪ್ಯಾಕೇಜ್ ರಿಲೀಸ್ ಮಾಡುತ್ತೇವೆ ನೇಕಾರರದು, ಎಂದು ಅವರು ಪಾಪ ಆಶೆಗಣ್ಣಿನಿಂದ ನೋಡುತ್ತಾ ಕೂತಿದ್ದಾರೆ. ಸುದ್ದೀನೇ ಇಲ್ಲ ಪ್ಯಾಕೇಜಿನದು. ಆಮೇಲೆ ಅಭಿವೃದ್ಧಿ ಮಂಡಲಿಗಳ ಬಗ್ಗೆ ನಾವು ಸಾಕಷ್ಟು ಹೇಳಿದ್ದೇವೆ, ಬಯಲುಸೀಮೆ ಅಭಿವೃದ್ಧಿ ಮಂಡಲಿ, ಹೈದಾರಾಬಾದ್ ಅಭಿವೃದ್ಧಿ ಮಂಡಲಿ, ಮಲೆನಾಡು ಅಭಿವೃದ್ಧಿ ಮಂಡಲಿ – ಇವಕ್ಕಂತೂ ಹಣ ಇಲ್ಲ. ಯಾಕೆ ಇವು? ಆ ಮಂಡಲಿಗಳನ್ನು ಮುಚ್ಚಿಬಿಡಿರಪ್ಪ ಅಂತ ಹೇಳಿದೆವು. ಇವತ್ತು ನಿಮಗೆ ಹೇಳುತ್ತೇನೆ, ನಮ್ಮ ಅನುಭವವೇ ಎಲ್ಲರ ಕ್ಷೇತ್ರಗಳ ಅನುಭವವೂ ಇರಬೇಕು. ಬಯಲುಸೀಮೆಯಿಂದ ಬಂದವರು ನಾವು, ಅಧ್ಯಕ್ಷರು ಬಯಲುಸೀಮೆಯಿಂದ, ಐದು ಲಕ್ಷ ರೂ ಕೆಲಸ ಆಗಿಲ್ಲ. ಎರಡು ವರ್ಷಗಳಿಂದ ನಾವು ಕೇಳಿಕೊಳ್ಳಹತ್ತಿದ್ದೇವೆ, ಆಮೇಲೆ ನಬಾರ್ಡಿನಿಂದ 50 ಲಕ್ಷ ರೂಗಳ ಲಿಸ್ಟ್ ತೆಗೆದುಕೊಂಡರು. ಈಗೇನು ಮುಖ್ಯಮಂತ್ರಿಗಳ ಸಡಕ್ ಯೋಜನೆ ಬಂತಲ್ಲಾ, 1 ಕೋಟಿ 25 ಲಕ್ಷದ ಲಿಸ್ಟ್ ತೆಗೆದುಕೊಂಡಿದ್ದಾರೆ, ನಮ್ಮ ಕಡೆಯಿಂದ ಎರಡೂವರೆ ಕೋಟಿ ರೂ ಲಿಸ್ಟ್ ತೆಗೆದುಕೊಂಡಿದ್ದಾರೆ. ಎರಡು ವರ್ಷದ್ದು ಅಂತ ಹೇಳಿ. ಆದರೆ ಇನ್ನೂವರೆಗೆ ಅದರ ಸುದ್ದಿ ಇಲ್ಲ. ಹೋಗಲಿ ಬಯಲು ಸೀಮೆಯದ್ದು, ನಬಾರ್ಡಿನಿಂದ 50 ಲಕ್ಷ ರೂ. ಕೊಡುತ್ತೇವೆ ಅಂದರು, ಎಲ್ಲಾ ಲಿಸ್ಟ್ ಕೊಟ್ಟೆವು, ಇನ್ನೂ ಸುದ್ದಿ ಇಲ್ಲ, ಸರ್ಕಾರ ಯಾಕೆ ನಡೆಸುತ್ತಿದ್ದೀರಿ ಅಂತ ನಮಗೆ ಅರ್ಥಾನೇ ಆಗುತ್ತಾ ಇಲ್ಲ ಆ ಬಯಲುಸೀಮೆ ಮಲೆನಾಡು, ಹೈದರಾಬಾದು ಎಲ್ಲಾ ಬಂದ್ ಆದರೂ ಮಾಡ್ರಿ ಹೋಗಲಿ; ಕಡೆಗೆ ಶಾಸಕರಿಗೆ 40 ಲಕ್ಷ ರೂ ಕೊಡುತ್ತೇವೆ ಅಂತ ನಾವು ತಿಳಿದುಕೊಂಡಿದ್ದೆವು. ಏನೋ ಒಂದು ತುರ್ತು ಕೆಲಸ, ಏನೋ ಒಂದು ಯುವಕರ ಮಂಡಲ ಮಹಿಳಾ ಮಂಡಲ ಕಟ್ಟಲಿಕ್ಕೆ ಏನೊ ಒಂದು ಬೋರ್‌ವೆಲ್ ರಿಪೇರಿ, ಒಂದಿಷ್ಟು ಬೋರ್‌ವೆಲ್ಲಾದರೂ ಮಂಜೂರು ಮಾಡೋಣ ಬರಗಾಲ ಅಂತ 40 ಲಕ್ಷ ರೂ ಕೊಡುತ್ತಾರೆ ಮುಖ್ಯಮಂತ್ರಿಗಳು ಅಂತ ಘೋಷಣೆ ಮಾಡಿದ್ದರು, ಅಲ್ಲೆಲ್ಲಾ ನಮ್ಮನ್ನು ಕೇಳಲು ಹತ್ತಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಜ್ಞಾನೇಂದ್ರರವರೇ ದಯವಿಟ್ಟು, ಹೇಳಿ, ನಿಮ್ಮ ನಾಯಕರು ಹೆಳುತ್ತಿರುವ ಬಗ್ಗೆ. ಹೋದ ಸಾರಿ ಶಾಸಕರ ನಿಧಿಯಿಂದ ಬರಗಾಲದಲ್ಲಿ ಉಪಯೋಗ ಮಾಡಲು ಕೊಟ್ಟಿದಾರೆ.

ಶ್ರೀ ಜಗದೀಶ್ ಶೆಟ್ಟರ್ : ಪಾಪ ಅವರನ್ನು ಯಾಕೆ ವಕಾಲತ್ತಿಗೆ ನೀವು ಕರೆಸುತ್ತಿದ್ದೀರಿ, ನಾನೇ ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಕೇಂದ್ರ ಸರ್ಕಾರ ಅಕ್ಕಿ ಕೊಟ್ಟಿತು. 30 ಲಕ್ಷ ರೂ. ಬಿಡುಗಡೆ ಮಾಡುತ್ತೇವೆ ಅಂತ ಇವರು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ : ಮೊದಲನೇ ಸಲ 25 ಲಕ್ಷ ರೂ. ಕೊಟ್ಟರು, ಮುಂದಿನ ಸಲ 40 ಲಕ್ಷ ರೂ. ಬರಗಾಲದ ಸಲುವಾಗಿ ಕಾಮಗಾರಿ ಸಲುವಾಗಿ, ಬಡ್ಡಿ ಮನ್ನಾ, ಅದ್ನು ಬಿಟ್ಟು ಬೇರೆ ಅಮೌಂಟ್ ಕೊಡ್ರಿ ಅಂದರೆ ಕೊಡಲಿಲ್ಲ. ಆ ಮೇಲೆ ಈ ವರ್ಷದ್ದು ಮುಖ್ಯಮಂತ್ರಿಗಳು ಪ್ರಾಮಿಸ್ ಮಾಡಿದ್ದರು ಹೋದ ಸಲ, ಕೇಳಿದ್ದೆ 40 ಲಕ್ಷರೂದ್ದು ಏನಾಯಿತು ಶಾಸಕರ ಫಂಡು ಅಂತ, ಇಲ್ಲ ಈ ಸಲ ರಿಲೀಸ್ ಮಾಡುತ್ತೇವೆ ಅಂದರು, ಆಮೇಲೆ ಧರಣಿ ಕೂತಿದ್ದೆವು, ಅಲ್ಲಿ ಎಲ್ಲಾ ಪಕ್ಷಗಳ ಸಭೆ ಕರೆದಿದ್ದಿರಿ, ಅಲ್ಲಿ ಮುಖ್ಯಮಂತ್ರಿಗಳು ಪ್ರಾಮಿಸ್ ಮಾಡಿದ್ದರು, ಏನೇ ತೊಂದರೆ ಆದರೂ ಸಹ 40 ಲಕ್ಷ ರೂ ಶಾಸಕರ ಅಭಿವೃದ್ಧಿ ನಿಧಿ ಅದನ್ನು ಬಿಡುಗಡೆ ಮಾಡುತ್ತೇವೆ ಅಂತ. ಏನೂ ಇಲ್ಲ. ಇದು ಕೇವಲ ಪ್ಯಾಕೇಜ್‌ಗಳ ಸರ್ಕಾರ, ಆದರೆ ಆ ಪ್ಯಾಕೇಜ್‌ನಿಂದ ಏನೂ ಇವತ್ತು ಪರಿಹಾರ ಆಗಲಿಲ್ಲ. ಎಲ್ಲಿಗೆ ಬರುತ್ತದೆ ಪರಿಸ್ಥಿತಿ ಅಂದರೆ ಇನ್ನೇನು ಚುನಾವಣೆ ಬಹಳ ದಿವಸ ಇಲ್ಲ, ನಿಮ್ಮನ್ನು ಜನ ಈ ಪ್ಯಾಕೇಜ್ ಸರ್ಕಾರವನ್ನು ಪ್ಯಾಕ್ ಮಾಡಿ ಮನೆಗೆ ಕಳುಹಿಸುತ್ತಾರೆ ಅಷ್ಟೇ. ಅಂತಹ ಪರಿಸ್ಥಿತಿ ಬಂದಿದೆ ಅಷ್ಟೇ. ಬೇರೆ ಇಲ್ಲ ಅದಕ್ಕಾಗಿ ಅಧ್ಯಕ್ಷರೇ, ಇವತ್ತು ಬರಗಾಲಕ್ಕಾಗಿ ರಾಜ್ಯಸರ್ಕಾರ ತನ್ನ ಕಡೆಯಿಂದ ಒಂದು ಪೈಸೆ ಬಿಡುಗಡೆ ಮಾಡಲಿಲ್ಲ. ಅದಕ್ಕಾಗಿ ಏನೂ ವಿನಿಯೋಗ ಮಾಡಲಿಲ್ಲ. ಮತ್ತೆ ಕೇಂದ್ರ ಸರ್ಕಾರದತ್ತ ಬೆಟ್ಟು ಮಾಡು ತೋರಿಸುವುದು, ಅವರು ಈಗಾಗಲೇ ಹತ್ತು ಲಕ್ಷ ಟನ್ ಆಹಾರ ಕೊಟ್ಟಿದ್ದಾರೆ, ಅಕ್ಕಿ ಕೊಟ್ಟಿದ್ದಾರೆ, 450 ಕೋಟಿರೂಗಿಂತ ಜಾಸ್ತಿ ಹಣ ಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ಅಭಿನಂದನೆ ಹೇಳಿ ನೆನೆಸಿಕೊಳ್ಳುವಂತಹದು ಏನೂ ಇಲ್ಲ, ಅವರಿಗಷ್ಟು ಕೊಟ್ಟಿದ್ದಾರೆ ಇವರಿಗಿಷ್ಟು ಕೊಟ್ಟಿದ್ದಾರೆ, ಇದೇ ಆಯಿತು ಬೆಳಗಿನಿಂದ ಸಂಜೆವರೆಗೂ ರಗಡಿ ಇವರದ್ದು, ಬಂದಿದ್ದೂ ಸಹ ಉಪಯೋಗ ಮಾಡಲಿಲ್ಲ ಇವರು,

ಶ್ರೀ ಕಾಗೋಡು ತಿಮ್ಮಪ್ಪ : ಅಭಿನಂದನೆ ಸಲ್ಲಿಸಿಲ್ಲ ಅಂತ ಯಾರು ಹೇಳುತ್ತಾರೆ, ನಿಜ ಹೇಳಿ, ನೀವು ಕರ್ನಾಟಕ ರಾಜ್ಯದವರು, ಕರ್ನಾಟಕ ಹಿತವನ್ನು ಬಯಸತಕ್ಕಂತಹವರು, ನಮ್ಮ ಹಿತವನ್ನು ಬಲಿಕೊಟ್ಟು ಅವರಿಗೆ ಮಾಡಿದ್ದಾರಲ್ಲಾ ನೀವೇ ಹೇಳಿ.

ಶ್ರೀ ಬಿ.ಎಚ್. ಬನ್ನಿಕೋಡ್ : ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಅಭಿನಂದಿಸಿದ್ದಾರೆ ನೋಡಿ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ನೋಡ್ರಿ ಹೇಳಿಬಿಡುತ್ತೇನೆ, 2003–04ರಲ್ಲಿ ಕರ್ನಾಟಕ ಸರ್ಕಾರಕ್ಕೆ ಬಂದದ್ದು ಪ್ರಕೃತಿ ವಿಕೋಪ ನಿಧಿಯಿಂದ 64.70 ಲಕ್ಷ ರೂ. ಆಮೇಲೆ NCCF ನಿಧಿಯಿಂದ 315.86 ಕೋಟಿ ರೂ. ಆಮೇಲೆ ಮೂರು ಲಕ್ಷ ಮೂವತ್ತು ಸಾವಿರ ಮೆಟ್ರಿಕ್ ಟನ್ ಬಂದಿದೆ,

ಆಮೇಲೆ 2002–03ರಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಪ್ರಕೃತಿ ವಿಕೋಪ ನಿಧಿಯಿಂದ 61.66 ಕೋಟಿ NCCF ರೂ. ಇಂದ 207.65 ಲಕ್ಷ ರೂ ಬಂದಿದೆ ಮತ್ತು 7.20 ಲಕ್ಷ ಮೆಟ್ರಿಕ್ ಟನ್ ಆಹಾರ ಕೊಟ್ಟಿದೆ, ಇನ್ನು ಆಂಧ್ರದ್ದು ಹೇಳುತ್ತಾ ಇರುತ್ತಾರೆ, ಆಂಧ್ರಕ್ಕೆ 2003–04 NCCF ನಿಂದ ಯಾವುದೂ ಹಣ ನೀಡಿಲ್ಲ. ಒಂದು ಲಕ್ಷ ಮೆಟ್ರಿಕ್ ಟನ್ ಆಹಾರ ಕೊಟ್ಟಿದ್ದಾರೆ, ಆಮೇಲೆ ಹಿಂದಿನ ರೆಕಾರ್ಡೂ ಇದೆ, ಆದರೆ ನಿಮಗೆ ಬಂದದ್ದನ್ನು ಸರಿಯಾಗಿ ಉಪಯೋಗ ಮಾಡಲಿಲ್ಲ. ರಿಕಾರ್ಡ್ಸೆಲ್ಲಾ ಕೊಡುತ್ತೇನೆ ಬೇಕಾದರೆ, ರಾಜಾಸ್ತಾನಕ್ಕೆ ಎಷ್ಟು ಕೊಟ್ಟಿದ್ದಾರೆ ಹೇಳಲೇ? ಅಲ್ಲಿ ಕಾಂಗ್ರೆಸ್ ಸರ್ಕಾರಾನೇ ಇತ್ತಲ್ಲಾ, ಇಡೀ ರಾಷ್ಟ್ರದಲ್ಲಿ ಹೆಚ್ಚು ನೆರವು ಸಿಕ್ಕಿದ್ದು ರಾಜಾಸ್ತಾನಕ್ಕೆ, ರಾಜಾಸ್ತಾನಕ್ಕೆ NCCF ಇಂದ 889.69 ರೂ ಸಿಕ್ಕಿದೆ, ಅಂದರೆ ಈ ವರ್ಷದ್ದು ಆಮೇಲೆ 32.05 ಲಕ್ಷ ಮೆಟ್ರಿಕ್ ಟನ್, ರಾಜಾಸ್ತಾನಕ್ಕೆ ಅಂದರೆ ಕಾಂಗ್ರೆಸ್ ಬಿಜೆಪಿ ಮತ್ತೊಂದು ಸರ್ಕಾರ ಇದು ತಾರತಮ್ಯ ಅಂತ ಮಾತನಾಡುವುದು ನಿಮಗೆ ಪದ್ಧತಿಯಾಗಿಹೋಗಿದೆ, ಹಿರಿಯ ಸಚಿವರು ಅನುಭವಿಗಳು ಈ ರೀತಿ ಮಾತನಾಡುವಂತಹದಲ್ಲ, ಮಲತಾಯಿ ಧೋರಣೆ ಅದಾಯಿತು, ಇದಾಯಿತು. ನೀವು ಏನು ಮಾಡಿದಿರಿ ಹೇಳಿರಿ, ನೀವು ಹೇಳೋಕೆ ತಯಾರಿಲ್ಲವಲ್ಲಾ, ನೀವು ಎಷ್ಟು ಕೊಟ್ಟಿದ್ದೀರಿ, ಏನು ಮಾಡಿದ್ದೀರಿ, ಇಲ್ಲಿಯವರೆಗೆ ನಿಮ್ಮ ಖಜಾನೆಯಿಂದ ಎಷ್ಟು ಹಣ ರಿಲೀಸ್ ಮಾಡಿದ್ದೀರಿ, ಒಂದು ಸ್ಟೇಟಸ್ ರಿಪೋರ್ಟ್ ಅನ್ನು ಕೊಡಿ:

ಮಾನ್ಯ ಸದಸ್ಯರು : ನಾವು ಮಾಡಿದ್ದೆಲ್ಲಾ ರಾಜ್ಯಪಾಲರ ಭಾಷಣದಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್ : ಆಮೇಲೆ ಕಳೆದ ಸಲ ಮುಖ್ಯಮಂತ್ರಿಗಳು ಎಲ್ಲಾ ಪಕ್ಷಗಳ ನಾಯಕರನ್ನೂ ಕರೆದರು, ನಾವು ಧರಣಿ ಕೂತಿದ್ದೆವು, ಈ ಬರಗಾಲದ್ದರಲ್ಲಿ ಅವ್ಯವಹಾರವಾಗಿದೆ, ಸದನ ಸಮಿತಿ ನೇಮಕ ಮಾಡಿ ಅಂದೆವು, ಮಾಡಲಿಲ್ಲ, ಅಭಿವೃದ್ಧಿ ಆಯುಕ್ತರವನ್ನು ಮಾಡುತ್ತೇವೆ ಅಂದಿರಿ ಅದರ ನೋಟಿಫಿಕೇಶನ್ ಆಗಲಿಲ್ಲ. ಅವತ್ತು ನೀವೇನು ಮಾತು ಕೊಟ್ಟಿದ್ದಿರಿ, ಈ ಸದನ ಮುಗಿಯುವುದರೊಳಗಾಗಿ ಒಂದು ಸ್ಟೇಟಸ್ ವರದಿ ಕೊಡುತ್ತೇವೆ ಅಂದಿದ್ದಿರಿ, ಸ್ಟೇಟಸ್ ರಿಪೋರ್ಟ್ ಇನ್ನೂವರೆಗೆ ಬರಲಿಲ್ಲ ಹೊರಗೆ, ಇವತ್ತಿನ ಕ್ಷಣದವರೆಗೆ ಈ ಬರಗಾಲ ಕಾಮಗಾರಿಗಳು ಎಲ್ಲೆಲ್ಲಿ ಎಷ್ಟು ನಡೆದಿವೆ ಎಷ್ಟು ಹಣ ಬಂದಿತ್ತು ಎಷ್ಟು ಖರ್ಚಾಯಿತು, ನಿಮ್ಮ ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನು ಇದರ ಬಗ್ಗೆ ಇವತ್ತಿನವರೆಗೂ ಸ್ಟೇಟಸ್ ರಿಪೋರ್ಟ್ ಕೊಡಲಿಲ್ಲ. ಸದನ ಮುಗಿದುಹೋಯಿತು, ಮತ್ತೊಂದು ಸದನ ಬಂತು, ಇನ್ನೂವರೆಗೆ ಸ್ಟೇಟಸ್ ವರದಿ ನಿಮ್ಮ ಕಡೆಯಿಂದ ಇಲ್ಲ. ಇದು ಇವತ್ತಿನ ಪರಿಸ್ಥಿತಿ, ಇದು ವಸ್ತುಸ್ಥಿತಿ, ಆಮೇಲೆ ಬೆಳೆವಿಮೆ ಹಣ, ಸಧ್ಯಕ್ಕೆ ಬೆಳೆ ವಿಮೆ ಹಣ ರಿಲೀಸ್ ಮಾಡುವುದಕ್ಕೆ ತಯಾರಿಲ್ಲ. ರೈತರು ಬರಗಾಲದ ಬವಣೆಯಿಂದ ಸಾಯುವುದಕ್ಕೆ ಹತ್ತಿದ್ದಾರೆ, ಆತ್ಮಹತ್ಯೆ ಮಾಡಿಕೊಳ್ಳಹತ್ತಿದ್ದಾರೆ, ಅಲ್ಲಿ ನಾವು ಪ್ರವಾಸಕ್ಕೆ ಹೋದಾಗ ಹೇಳುತ್ತಾರೆ ಅವರು, ಕೊನೇ ಪಕ್ಷ ಬೆಳೆ ವಿಮೇ ಹಣವನ್ನಾದರೂ ಬಿಡುಗಡೆ ಮಾಡಿಸಿರಿ, ಬರಗಾಲ ಕಾಮಗಾರಿ ಅಂತ ಇಲ್ಲ. ಕೈಗೆ ಕೆಲಸ ಇಲ್ಲ. ಬಡ್ಡಿ ಕೊಡುವುದಕ್ಕಾಗುವುದಿಲ್ಲ ಸಾಲ ಮರುಪಾವತಿ ಮಾಡುವುದಕ್ಕಾಗುವುದಿಲ್ಲ. ಕೊನೇ ಪಕ್ಷ ಬೆಳೆವಿಮೆ ಹಣವನ್ನಾದರೂ ಬಿಡುಗಡೆ ಮಾಡಿಸಿರಿ ಅಂತ ಕೇಳುತ್ತಾರೆ, ಆ ಬೆಳೆ ವಿಮೆ ಹಣಾನೂ ಬಿಡುಗಡೆ ಆಗಲಿಲ್ಲ. ಎಷ್ಟು ಬಿಡುಗಡೆ ಆಗಿದೆ ಹೇಳಲಿ ಅವರು, ಮಾನ್ಯ ಹೆಚ್.ಕೆ. ಪಾಟೀಲರು ಕೃಷಿ ಸಚಿವರಾದ ಮೇಲೆ ಹೇಳಿಕೆ ಮೇಲೆ ಹೇಳಿಕೆ ಕೊಟ್ಟರು, 50 ಕೋಟಿ ರೂ ರಿಲೀಸ್ ಮಾಡಿದ್ದೇವೆ ಅಂದರು, ಇನ್ನೂ ರೈತರಿಗೆ ಹೋಗಿ ಮುಟ್ಟಲಿಲ್ಲ. ಇನ್ನೂ 150 ಕೋಟಿರೂಗಿಂತ ಜಾಸ್ತಿ ಹಣ ರೈತರಿಗೆ ವಿಮೆ ಹಣ ಕೊಡಬೇಕಾಗಿದೆ. ಇನ್ನೂವರೆಗೆ ಕೊಟ್ಟಿಲ್ಲ. ಅದರ ಪರಿಸ್ಥಿತಿ ಏನು? ಅದನ್ನು

ಹೇಳಬೇಕೆಂದು ಈ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ಇಲ್ಲಿ ಪ್ರಮುಖವಾಗಿ ಮಾತನಾಡುವಂತಹದು, ಇವತ್ತಿನ ನೀರಾವರಿ ಯೋಜನೆಗಳ ಬಗ್ಗೆ ಎರಡು ಮೂರು ಯೋಜನೆಗಳ ಬಗ್ಗೆ ಇವತ್ತು ನಾನು ಮಾತನಾಡಬಯಸುತ್ತಿದ್ದೇನೆ, ಏನಾಗಿದೆ ಅಂದರೆ ಕೃಷ್ಣಾ ಕಣಿವೆ, ಕೆಲವೊಂದು ಫ್ಯಾಕ್ಟ್ ನಿಮ್ಮ ಮುಂದೆ ತರುತ್ತಿದ್ದೇನೆ, ಯಾಕೆಂದರೆ ನೀರಾವರಿ ಯೋಜನೆಗಳ ಬಗ್ಗೆ ನೀವು ರೆಫರ್ ಮಾಡಿದ್ದೀರಿ, ಇವತ್ತು ಭೀಮಾ ನದಿ ಪರಿಸ್ಥಿತಿ ಏನಾಗಿದೆ, ನಾನು ಸ್ಟಾಟಿಸ್ಟಿಕ್ಸ್ ಹೇಳುತ್ತಾ ಇಲ್ಲ, ಪರಿಸ್ಥಿತಿ ಏನಿದೆ ಸರ್ಕಾರದ ಮುತುವರ್ಜಿ ಏನು ಅಂತ ಇವತ್ತು ಕೇಳಬಯಸುತ್ತಿದ್ದೇನೆ. ಏನಾಗಿದೆ ಅಂದರೆ ಇವತ್ತು ಭೀಮಾ ನದಿಗೆ ಉಜನಿ ಅಣೆಕಟ್ಟಿನಿಂದ ನೀರು ಬರಬೇಕು, ಆದರೆ ಉಜನಿ ಅಣೆಕಟ್ಟಿನಿಂದ ನೀರು ತರಿಸಲು ನಿಮ್ಮ ಕೈಲಿ ಆಗುತ್ತಾ ಇಲ್ಲ. ಮೊನ್ನೆ ನಾನು ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸ ಹೋಗಿದ್ದೆ ಗುಲ್ಬರ್ಗ ಜಿಲ್ಲೆಗೆ ಪ್ರವಾಸ ಹೋಗಿದ್ದೆ ಆದರೆ ಭೀಮಾ ನದಿಯಲ್ಲಿ ಇವತ್ತು ನೀರಿಲ್ಲ, ಇವತ್ತಿನ ಅಲ್ಲಿನ ಪರಿಸ್ಥಿತಿ ಬಗ್ಗೆ ಫೋಟೋ ಸಹಿತ ನಾನು ತೆಗೆದುಕೊಂಡು ಬಂದಿದ್ದೇನೆ.

6.50 ಪಿಎಂ

ಇವತ್ತು ಎಂಟು ಬ್ಯಾರೇಜುಗಳಿದ್ದಾವೆ. ಆ ಭೀಮಾ ನದಿಗುಂಟ ಎಂಟು ಬ್ಯಾರೇಜುಗಳಿವೆ. ಆದರೆ ಇವತ್ತು ಮಹಾರಾಷ್ಟ್ರದಲ್ಲಿ ಏನು ಬ್ಯಾರೇಜುಗಳಿವೆ, ಅದರಲ್ಲಿ ನೀರು ಇದೆ. ಇವತ್ತು ನಮ್ಮ ಕರ್ನಾಟಕದ ಬ್ಯಾರೇಜುಗಳೇನು ಇವೆ, ಅದರಲ್ಲಿ ನೀರಿಲ್ಲ. ಇದು ವಸ್ತುಸ್ಥಿತಿ. ಈ ರೀತಿ ಪರಿಸ್ಥಿತಿ ಇದೆ. ಮೊನ್ನೆ ಏನೋ ಮಾನ್ಯ ಅಲ್ಲಂ ವೀರಭದ್ರಪ್ಪನವರು ಹೊಸದಾಗಿ ಖಾತೆಯನ್ನು ತೆಗೆದುಕೊಂಡಮೇಲೆ ಮೀಟಿಂಗನ್ನು ಕರೆದಿದ್ದರು. ಆಗ ಅವರ ಸ್ಟೇಟ್‌ಮೆಂಟ್ ಬಂದಿದೆ. ಅವರ ಜೊತೆ ಮಾತುಕತೆಯನ್ನು ಮಾಡಿದ್ದೇವೆ. ನಮ್ಮ ನಾಲ್ಕು ಬ್ಯಾರೇಜುಗಳಿಗೆ ನೀರನ್ನು ಬಿಡುವುದಕ್ಕೆ ಒಪ್ಪಿಕೊಂಡಿದ್ದಾರೆ ಎನ್ನುವಂಥದ್ದು. ಅದರ ಬಗ್ಗೆ ಅವರು ಸ್ಪಷ್ಟೀಕರಣವನ್ನು ಮಾಡಬೇಕು. ಕೆಲವು ಕಡೆ ಹಾಹಾಕಾರ ಇದೆ. ಇವತ್ತು ನೂರಾರು ಗ್ರಾಮಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಜಾನುವಾರುಗಳಿಗೆ ನೀರಿಲ್ಲ. ಆ ಭೀಮಾ ನದಿ ಬತ್ತಿಹೋಗಿದೆ. ಇನ್ನು ಅದೇ ರೀತಿ ಕೊಯ್ನಾದ್ದು ಕೊಯ್ನಾ ಅಣೆಕಟ್ಟಿನಿಂದ ಅಥಣಿ ಭಾಗದಲ್ಲಿ, ಆ ಚಿಕ್ಕೋಡಿ ಭಾಗದಲ್ಲಿ ಇವತ್ತು ಕೃಷ್ಣಾ ನದಿಗೆ ನೀರ ಬರಬೇಕು. ಆದರೆ ಇವತ್ತು ಆ ಕೃಷ್ಣಾ ನದಿಯಲ್ಲಿ ನೀರಿಲ್ಲ. ಅಲ್ಲಿ ನಾನು ಕಳೆದ ತಿಂಗಳು ಹೋದಾಗ ಇನ್ನೊಂದು ನಾಲ್ಕು ದಿವಸ ನೀರಿಲ್ಲವೆಂದರೆ ಪೂರ್ತಿ ಬತ್ತಿ ಹೋಗತಕ್ಕಂಥ ಪರಿಸ್ಥಿತಿ ಕೃಷ್ಣಾದ್ದು. ಇವತ್ತು ಕೊಯ್ನಾ ಅಣೆಕಟ್ಟಿನಿಂದ ನೀರನ್ನು ಬಿಡಿಸಬೇಕಾಗಿದೆ. ಅದನ್ನು ಬಿಡಿಸಲಿಕ್ಕೆ ಆಗುತ್ತಿಲ್ಲ ರಾಜ್ಯಸರ್ಕಾರಕ್ಕೆ ಇದು ವಸ್ತುಸ್ಥಿತಿ. ಇದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ. ಅದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿರಿ ಎನ್ನತಕ್ಕಂಥದ್ದು. ಆಮೇಲೆ ಕಳಸಾ ಬಂಡೂರಿ ನಾಲೆಯೋಜನೆ ಬಗ್ಗೆ, ಈ ಕಡೆ ಧಾರವಾಡ ಭಾಗದಲ್ಲಿ ಬಾಗಲಕೋಟೆ, ಆಮೇಲೆ ಬೆಳಗಾಂ ಭಾಗದಲ್ಲಿ ಸವದತ್ತಿ ಭಾಗದಲ್ಲಿ ದೊಡ್ಡ ಹೋರಾಟ ನಡೆಯುತ್ತಿದೆ ಕಳಸಾ ಬಂಡೂರಿ ನಾಲಾ, ಇವತ್ತು ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಸಲುವಾಗಿ ಎಂಟು ಟಿಎಂಸಿ ನೀರು ಆ ಮಲಪ್ರಭಾಕ್ಕೆ ಜೋಡಣೆ ಮಾಡುವಂಥದ್ದು ಕಳಸಾ ಬಂಡೂರಿ ನಾಲಾ. ಅದನ್ನು ಇನ್ನೂವರೆಗೆ ಅನುಷ್ಠಾನ ಮಾಡಲಿಕ್ಕಾಗುತ್ತಿಲ್ಲ. ಇವತ್ತು ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರನ್ನು ಹತ್ತು ದಿವಸಕ್ಕೆ ಒಮ್ಮೆ ಕೊಡುತ್ತಾರೆ. ಇಲ್ಲಿ ಬೆಂಗಳೂರು, ಮೈಸೂರಿನಲ್ಲಿ ಕುಡಿಯುವ ನೀರಿನ ಪ್ರತಿ ದಿವಸ ಕೊಟ್ಟರೆ ಹುಬ್ಬಳ್ಳಿ-ಧಾರವಾಡ ಮಂದಿಗೆ ಹತ್ತು ದಿವಸಕ್ಕೆ ಒಮ್ಮೆ ಕುಡಿಯುವ ನೀರನ್ನು ಕೊಡುತ್ತಾರೆ. ಇವತ್ತೊಂದು ಉತ್ತರ ಬಂದಿದೆ. ಆ ಉತ್ತರದಲ್ಲಿ ಏನು

ಹೇಳಿದ್ದೀರಿ, ಏಳು ದಿವಸಕ್ಕೆ ಒಮ್ಮೆ ಹುಬ್ಬಳ್ಳಿ-ಧಾರವಾಡ ಮಂದಿಗೆ ಕುಡಿಯುವ ನೀರನ್ನು ಕೊಡುತ್ತೇವೆಂದು ಹೇಳಿ ಬಂದಿದೆ. ಮಾನ್ಯ ಚಂದ್ರೇಗೌಡರು ವಿಧಾನಪರಿಷತ್ತಿನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅವರಿಗು ಇದು ಗೊತ್ತಿದೆ. ಇದು ಅವರ ಗಮನಕ್ಕೂ ಬಂದಿದೆ. ಇವತ್ತು ಹತ್ತು ದಿವಸಗಳಿಗೊಮ್ಮೆ ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರಿನ ಪರಿಸ್ಥಿತಿ ಇದೆ. ಅಲ್ಲಿ ವಿಶ್ವಬ್ಯಾಂಕ್ ನೆರವಿಗೆ 54 ಕೋಟಿ ರೂ. 144 ಕೋಟಿ ರೂ. ಮೂರನೇ ಹಂತದ ಯೋಜನೆ, ಇನ್ನು ವಿಶ್ವಬ್ಯಾಂಕ್ ನೆರವು, ಅದರಲ್ಲೇ ಇದ್ದಾರೆ. ಆದರೆ ಒಂದು ವಿಶೇಷವಾದಂಥ ಅನುದಾನವನ್ನು ಕೊಟ್ಟು ಆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸರ್ಕಾರದ ಕಡೆಯಿಂದ ಏನೂ ಪ್ರಯತ್ನವಿಲ್ಲ. ಅಂದರೆ ಮಹಾನಗರಗಳ ಪರಿಸ್ಥಿತಿ ಇದು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೊಂದರೆಯಂತೂ ದೊಡ್ಡ ಪ್ರಮಾಣದಲ್ಲಿ ಹಾಹಾಕಾರ ಇದೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ನಾರಾಯಣಪುರ ಎಡದಂಡೆ ಕಾಲುವೆ ಏನು ಇದೆ, ಇದು ಯಾವಾಗಲೂ ಒಡೆಯುತ್ತದೆ. ಅದರ ಬಗ್ಗೆ ಮಾನ್ಯ ಕರಡಿ ಸಂಗಣ್ಣನವರು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದರು. ಈ ನಾರಾಯಣಪುರ ಎಡದಂಡೆ ಕಾಲುವೆ ಅದರಲ್ಲೂ particular 60ನೇ ಕಿಲೋಮೀಟರ್‌ನಲ್ಲಿ ಯಾವಾಗಲೂ 59.3, 59.7, ಮತ್ತು 60ನೇ ಕಿಲೋಮೀಟರ್ ಭಾಗದಲ್ಲಿ ಖಾಯಂ ಆಗಿ ಹಲವಾರು ವರ್ಷಗಳಿಂದ ಒಡೆಯುತ್ತಿದೆ. ಹೀಗಾಗಿ ಇವತ್ತು ಅಲ್ಲಿ ಲಕ್ಷಾಂತರ ಎಕರೆಗೆ ಲಕ್ಷಾಂತರ ರೈತರಿಗೆ ಇವತ್ತು ತೊಂದರೆ ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ಸಲವೇನಾದರೂ ಏನಾದರೂ ಕಾಲುವೆಯಲ್ಲಿ ನೀರು ಬಂದ್ ಆಯಿತೆಂದರೆ ಒಂದೊಂದು ಕೋಟಿ ರೂಪಾಯಿ ಬೆಳೆ ಹಾನಿ ರೈತರಿಗೆ ಆಗುತ್ತದೆ. ಈ ನಾರಾಯಣಪುರ ಎಡದಂಡೆ ಬಗ್ಗೆ ಏಕೆ ಒಂದು ಖಾಯಂ ಆದಂಥ ಪರಿಹಾರವನ್ನು ಹುಡುಕುವಂಥ ಕೆಲಸ ರಾಜ್ಯಸರ್ಕಾರದಿಂದ ಆಗುತ್ತಿಲ್ಲ. ಅಂದರೆ ರಾಜ್ಯಪಾಲರ ಭಾಷಣದಲ್ಲಿ ಕೇವಲ ಘೋಷಣೆಗಳು, ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂದು ಇದೆ. ಆದರೆ ಇವತ್ತು ನಿಜ ಪರಿಸ್ಥಿತಿ ಏನು ಇದೆ, ಅದರ ಬಗ್ಗೆ ಚಿಂತನೆ ಇಲ್ಲ. ನಿಜ ಪರಿಸ್ಥಿತಿ ಎಂದರೆ ಇವತ್ತಿಗೂ ಅಲ್ಲಿ ಕಾಲುವೆ ಒಡೆಯುತ್ತದೆ. ಏಕೆಂದರೆ ಅಲ್ಲಿ ಇಂಜಿನಿಯರ್ಸ್ ಏನೊಂದು opinion ಅನ್ನು ಕೊಟ್ಟಿದ್ದರು, ನೀವು ನಾಲಾ ತಿರುವು ಬೇರೆ ಕಡೆಗೆ ಮಾಡಿದ್ದೀರಿ, ಎಂದು ನೀರಾವರಿ ತಜ್ಞರೇನು ಕೊಟ್ಟಿದ್ದರು, ಅದನ್ನು ಬಿಟ್ಟು ಬೇರೆ ಕಡೆಗೆ ಮಾಡಿದ್ದರಿಂದ particular ಆ ಏರಿಯಾದಲ್ಲಿ ಅದು ಒಡೆಯುತ್ತಿದೆ ಎನ್ನುವಂಥದ್ದು, ಕಳೆದ ಎಂಟು-ಹತ್ತು ವರ್ಷಗಳಿಂದ ಅದೇ ಏರಿಯಾದಲ್ಲಿ ಒಡೆಯುತ್ತಿದೆ. ಬೇರೆ ಕಡೆಗೆ ಅದು ಒಡೆಯುತ್ತಿಲ್ಲ ಹೀಗಾಗಿ ಅದರ ಬಗ್ಗೆ ಸರ್ಕಾರ ಖಾಯಂ ಆದಂಥ ಪರಿಹಾರವನ್ನು ಹುಡುಕಬೇಕಲ್ಲವೇ? ಅದರ ಬಗ್ಗೆ ಚಿಂತನೆ ಇಲ್ಲ. ಹೀಗಾಗಿ ಇವತ್ತು ಪರಿಸ್ಥಿತಿ ಆ ಹಂತಕ್ಕೆ ಬಂದಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಮತ್ತು ಇನ್ನು ಈ ನೇಕಾರರ ಬಗ್ಗೆ ಇನ್ನೊಂದು ಸ್ವಲ್ಪ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ಏನೆಂದರೆ ಇವತ್ತು ಮಾನ್ಯ ರೇವಣ್ಣನವರು ಬರಬೇಕಾಗಿತ್ತು, ಬರಲಿಲ್ಲ. ಕಳೆದ ಸಲ ನಾನು ನೇಕಾರರ ಬಗ್ಗೆ ಬಹಳಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದೆ. ಇವತ್ತು ಕೈಮಗ್ಗ ಅಭಿವೃದ್ಧಿ ನಿಗಮ ಏನು ಇದೆ, ಅದನ್ನು ಮುಚ್ಚುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೇನು ಇವತ್ತು ಶಿಕ್ಷಣ ಇಲಾಖೆಯಿಂದ 17 ಕೋಟಿ ರೂಪಾಯಿಗಳು ಬರಬೇಕಾಗಿತ್ತು, ಇನ್ನೂ 17 ಕೋಟಿ ರೂಪಾಯಿಗಳು ಅವರಿಗೆ ಹೋಗಲಿಲ್ಲ. ಹೀಗಾಗಿ ನೇಕಾರರಿಗೆ ನೂಲು ಇಲ್ಲ. ನೂಲು ಕೊಡುತ್ತಿಲ್ಲ. ಅವರಿಗೆ ಕೂಲಿಯನ್ನೂ ಕೊಡುತ್ತಿಲ್ಲ.

ಇವತ್ತು ಕೈಮಗ್ಗ ನಿಗಮಕ್ಕೆ ಅಲ್ಲಿ ಎಂಡಿ ಮದನ್ ಗೋಪಾಲ್‌ರವರು ಈಗಾಗಲೇ ಸರ್ಕಾರಕ್ಕೆ ಸಾಕಷ್ಟು ಸಲ ಪತ್ರವನ್ನು ಬರೆದರು. ಇನ್ನು 17–18 ಕೋಟಿ ರೂಪಾಯಿಗಳ ಅನುದಾನವನ್ನು ಸರ್ಕಾರದಿಂದ ನೀವು ಕೊಟ್ಟರೆ ಇದು ಬದುಕುತ್ತದೆ, ಇಲ್ಲದಿದ್ದರೆ ಇನ್ನೊಂದು ಮೂರು ತಿಂಗಳಲ್ಲಿ ಇದು ಮುಚ್ಚಿಹೋಗುತ್ತದೆ ಎನ್ನುವಂಥ ಬಹಿರಂಗವಾದಂಥ ಪತ್ರವನ್ನು ಬರೆದರು. ಆದರೆ ಸರ್ಕಾರ ಇದುವರೆಗೂ ಸಹಾ ಹಣವನ್ನು ಬಿಡುಗಡೆ ಮಾಡುವುದಕ್ಕೆ ತಯಾರಿಲ್ಲ. ನೀವು ನೇಕಾರರ ಬಗ್ಗೆ ನೂರಾರು ಕೋಟಿ ರೂಪಾಯಿಗಳ ಪ್ಯಾಕೇಜ್ ಬಗ್ಗೆ ಮಾತನಾಡುತ್ತೀರಿ, ನಮಗೆ ಅಷ್ಟು ಬೇಕಾಗಿಲ್ಲ. immediately ಆ ಕೈಮಗ್ಗ ಅಭಿವೃದ್ಧಿ ನಿಗಮ ಏನು ಇದೆ, ಅದಕ್ಕೆ 17 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ. ನೇಕಾರರು ಬದುಕುತ್ತಾರೆ. ಇಲ್ಲದಿದ್ದರೆ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಹಾಗೆಯೇ ಇವತ್ತು ನೇಕಾರರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಇವತ್ತು ಜಮಖಂಡಿ ಭಾಗದಲ್ಲಿ ಎರಡು–ಮೂರು ಜನರು ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ ಅವರಿಗೆ ತಕ್ಷಣವೇ ಕೈಗೆ ಕೆಲಸ, ಮತ್ತು ಅವರಿಗೆ ಏನೊಂದು ಕೂಲಿಯನ್ನು ಕೊಡಬೇಕು, ಆ ಕೂಲಿಯನ್ನು ತಕ್ಷಣವೇ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಮತ್ತೊಂದು ಏನಾಗಿದೆ ಎಂದರೆ ಇವತ್ತು ನಿಮ್ಮ ಸರ್ಕಾರದ ಇಲಾಖೆ ಇವತ್ತು ಕೈಮಗ್ಗ ಅಭಿವೃದ್ಧಿ ನಿಗಮ ಇರುವುದು ಏಕೆ? ಇವತ್ತು 15 ಸಾವಿರ ಕುಟುಂಬಗಳಿದ್ದಾವೆ. ಕೈಮಗ್ಗ ಅಭಿವೃದ್ಧಿ ನಿಗಮದ ಮೇಲೆ ಅವಲಂಬನೆಯಾದಂಥವರು. ಅವರಿಗೆ ನೀವು ಇವತ್ತು ಕೂಲಿ ಕೊಡುತ್ತಿಲ್ಲ. ಏನೂ ಇಲ್ಲ. ಅವರಿಗೆ ಕೆಲಸವೂ ಇಲ್ಲ. ಅವರುಗಳು ಉಪವಾಸ ಬೀಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಇವತ್ತೇನಾಗಿದೆ ಎಂದರೆ ಅವರುಗಳು ಬಹಳ ಜನ ಇದ್ದರು. ಎಲ್ಲಾ ಇವತ್ತು ಕಡಿಮೆಯಾಗಿ ಅಷ್ಟಕ್ಕೆ ಬಂದಿದ್ದಾರೆ. ಒಂದು, ವಿದ್ಯಾ ವಿಕಾಸ ಯೋಜನೆಯಲ್ಲಿ 46 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ 29 ಕೋಟಿ ರೂ ಮಾತ್ರ ಕೊಟ್ಟಿರಿ. ಇನ್ನೂ 17 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಇವತ್ತು ನಿಮ್ಮ ಸರ್ಕಾರದ ಇಲಾಖೆಗಳೇನು ಇದ್ದಾವೆ, ಇವತ್ತು ಅಂಗನವಾಡಿ ಇರಬಹುದು, ಶಿಕ್ಷಣ ಇಲಾಖೆ ಇರಬಹುದು, ಮತ್ತು ಬೇರೆ ಬೇರೆ ಇಲಾಖೆ ಆರೋಗ್ಯ ಇಲಾಖೆ ಇವುಗಳಿಗೆಲ್ಲಾ ನೀವು ಸಮವಸ್ತ್ರಗಳನ್ನು ನೀಡಬಹುದು. ಕೈಮಗ್ಗ ಅಭಿವೃದ್ಧಿ ನಿಗಮವನ್ನು ನೋಡಲ್ ಏಜೆನ್ಸಿಯಾಗಿ ಮಾಡಿಕೊಡಬೇಕು. ಜನತಾ ಸೀರೆ ಅದು ಇತ್ತು. ಅದೂ ಹೋಯಿತು. ಅದನ್ನೂ ರದ್ದುಮಾಡಿಬಿಟ್ಟಿರಿ. ಜನತಾ ಸೀರೆಗಳನ್ನು ಕೊಡುವಂಥದ್ದು. ಹೀಗಾಗಿ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಇವತ್ತು ಕೆಲಸ ಇಲ್ಲ. ಸಿಬ್ಬಂದಿ ಮಾತ್ರ ಅಷ್ಟೇ ಇದೆ. ಹೀಗಾಗಿ ಇವತ್ತು ನೇಕಾರರು ಏನೂ ಮಾಡಲಾರದ ಪರಿಸ್ಥಿತಿ ಇದೆ. ಹೀಗಾಗಿ ಇವತ್ತು ನೇಕಾರರು ಸಂಕಷ್ಟದಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ ತಕ್ಷಣವೇ ಮತ್ತು ಪ್ಯಾಕೇಜ್ ಎನ್ನುತ್ತೀರೋ ಮತ್ತೇನು ಅನ್ನುತ್ತೀರೋ ತಕ್ಷಣವೇ ಆ ಒಂದು ನಿಗಮಕ್ಕೆ ಹಣವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿ ನೇಕಾರರ ಒಂದು ಸಹಾಯಕ್ಕೆ ಬರಬೇಕೆನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಮತ್ತೆ ಇನ್ನೊಂದು ಮೊನ್ನೆ ಬಿ.ಎಸ್. ಪಾಟೀಲರು, ರಾಜ್ಯದ ಮುಖ್ಯಕಾರ್ಯದರ್ಶಿಗಳು, ಅವರು ಹುಬ್ಬಳ್ಳಿಗೆ ಹೋದಾಗ ಒಂದು ಅನೌನ್ಸ್ ಮಾಡಿ ಬಂದರು. "ಉತ್ತರ ಕರ್ನಾಟಕದ ಇಪ್ಪತ್ತು ಪಟ್ಟಣಗಳ ಅಭಿವೃದ್ಧಿ ಸಲುವಾಗಿ 1600 ಕೋಟಿ ರೂಪಾಯಿ, ಎಡಿಬಿ ನೆರವಿನ ಯೋಜನೆ ಅಂಗೀಕಾರ" ಎಂದು ಹೇಳಿ. ಆದರೆ ಬಹುಶಃ ಸರ್ಕಾರದೊಳಗೇನಾದರೂ ಚಿಂತನೆಯಾಗಿದ್ದರೆ ಈ ರಾಜ್ಯಪಾಲರ ಭಾಷಣದಲ್ಲಿ ಅದು

ಬರುತ್ತಿತ್ತು. ಅದೇನೂ ಇಲ್ಲ. ದೊಡ್ಡದಾಗಿ ಅರ್ಧ ಪೇಜ್ ಸುದ್ದಿ ಬಂದಿದೆ. 1600 ಕೋಟಿ ರೂಪಾಯಿ ಎಡಿಬಿ ನೆರವಿನ ಯೋಜನೆ, ಉತ್ತರ ಕರ್ನಾಟಕದ ಇಪ್ಪತ್ತು ಪಟ್ಟಣಗಳ ಅಭಿವೃದ್ಧಿ ಅದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ. ಯಾವ ಮಂತ್ರಿಗಳೂ ಅದನ್ನು ಪ್ರಕಟ ಮಾಡಲಿಲ್ಲ. ಅಲ್ಲಿ ಹೋಗಿ ಮುಖ್ಯ ಕಾರ್ಯದರ್ಶಿಗಳು ಅದನ್ನು ಪ್ರಕಟ ಮಾಡುತ್ತಾರೆ. ಏನು ಅರ್ಥ? ಜನರಿಗೆ ಮರುಳು ಮಾಡುವಂಥ ಕೆಲಸ ಇವತ್ತು ಸರ್ಕಾರದಿಂದ ಇವತ್ತು ಅಧಿಕಾರಿಗಳ ಮುಖಾಂತರ ಹೊರಟಿದ್ದಾರೇನು? ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಬೇಕಾದರೆ ನಾನು ಆ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ verify ಮಾಡಲಿ. ಅವರೇನು ಉತ್ತರವನ್ನು ಹೇಳುತ್ತಾರೆಂದು ನಮಗೆಲ್ಲಾ ಗೊತ್ತಿದೆ. ಇವತ್ತು ನಿಮಗೆ ನಿಜವಾಗಿ ಈ ಒಂದು ಪ್ರಾದೇಶಿಕ ಅಸಮಾನತೆ ಹೋಗಬೇಕೆನ್ನುವ ಕಾಳಜಿ ಇದೆಯೇ? ಡಾಕ್ಟರ್ ನಂಜುಂಡಪ್ಪನವರ ಸಮಿತಿಯನ್ನು ತಾವೇನು ನೇಮಕ ಮಾಡಿದಿರಿ, ಅದನ್ನು ನಾನು appreciate ಮಾಡಿದೆ. ಬಹಳ ಹಿಂದೆಯೂ ನಾನು appreciate ಮಾಡಿದ್ದೇನೆ. ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಈ ಪ್ರಾದೇಶಿಕ ಅಸಮಾನತೆ ಬಗ್ಗೆ ಏನಾದರೂ ಒಂದು ಸ್ಟಡಿ ರಿಪೋರ್ಟ್ ಬೇಕಾಗಿತ್ತು. ನಿಜವಾದ ಪರಿಸ್ಥಿತಿ ಏನು ಎನ್ನುವಂಥದ್ದು ಬೇಕಾಗಿತ್ತು. ಅದೊಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅದನನು ನಾನು appreciate ಮಾಡುತ್ತೇನೆ. ಆದರೆ ಆ ವರದಿ ಬಂತು. ಆ ವರದಿಯ ಅನುಷ್ಠಾನ ಇವತ್ತು ಆಗುತ್ತಿಲ್ಲ. ಅವರೇನು ಹೇಳಿದರು, immediately 1400 ಕೋಟಿ ರೂಪಾಯಿ ಆ ಒಂದು ಭಾಗಕ್ಕೆ ಇವತ್ತು ಶೈಕ್ಷಣಿಕವಾಗಿ ಇರಬಹುದು, infrastructure development ಇರಬಹುದು, ಆರೋಗ್ಯ ಇಲಾಖೆ ಇರಬಹುದು, ಇನ್ನಿತರ ಹಲವಾರು ಇಲಾಖೆಗಳಿಗೆ ಡೆವಲಪ್‌ಮೆಂಟ್ ದೃಷ್ಟಿಯಿಂದ ವಿಶೇಷವಾದ ಅನುದಾನವನ್ನು ಕೊಡಿ ಎಂದು ಹೇಳಿದರು, ಬಜೆಟ್‌ನಲ್ಲಿ ಮೀಸಲಾಗಿರಿಸುತ್ತೇನೆ ಎಂದು ಹೇಳಿದರು, ಆದರೆ ಇವತ್ತು ಹತ್ತು ಕೋಟಿ ರೂಪಾಯಿಗಳನ್ನೂ ನಿಮ್ಮ ಕೈಯಿಂದ ಕೊಡುವುದಕ್ಕಾಗಲಿಲ್ಲ. ಬರೀ ಇಂಥ ಸ್ಟೇಟ್‌ಮೆಂಟ್‌ಗಳು ಮಾತ್ರ ಬರುತ್ತಿವೆ. ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡಿದಿರಿ. ಮತ್ತೊಂದು ಮಾಡಿದಿರಿ. ಆದರೆ ಇವತ್ತೇನು 1400 ಕೋಟಿ ರೂಪಾಯಿ ಅದರ ಬಗ್ಗೆ ಇವತ್ತು ಡಾ: ನಂಜುಂಡಪ್ಪನವರ ನಿಜವಾದಂಥ ಯೋಜನೆಗಳೇನು ಇದ್ದಾವೆ, ನಿಜವಾದ ವರದಿಯಲ್ಲಿ ಅಂಶಗಳೇನು ಇದ್ದಾವೆ, ಅದನ್ನು ಅನುಷ್ಠಾನ ಮಾಡುವಂಥ ಕೆಲಸ ಇವತ್ತು ಸರ್ಕಾರದ ಕಡೆಯಿಂದ ಆಗಲಿಲ್ಲ. ಹೀಗಾಗಿ ಇವತ್ತು ಸರ್ಕಾರ ಕೇವಲ ಜನರನ್ನು ಮರುಳು ಮಾಡುವಂಥ ಕೆಲಸವನ್ನು ಮಾಡುತ್ತಿದೆಯೇ ಹೊರತು ನಿಜವಾದ ಕಾಳಜಿ ನಿಮಗಿಲ್ಲ ಎನ್ನುವಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಏಕೆಂದರೆ ಇನ್ನೊಂದನ್ನೂ ಇಲ್ಲಿ ನಾನು ಹೇಳಬಯಸುತ್ತೇನೆ, ಇವತ್ತು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಹೈಕೋರ್ಟ್ ಪೀಠದ ಬಗ್ಗೆ ಸಾಕಷ್ಟು ಹೋರಾಟ ನಡೆಯಿತು. ಎಲ್ಲಾ ಭಾಗದಲ್ಲೂ ಕೂಡ ಹೋರಾಟ ನಡೆಯಿತು. ಅದನ್ನು ಮುಖ್ಯ ನ್ಯಾಯಾಧೀಶರಿಗೆ ಬಿಡುವಂಥದ್ದು. ಬಿಟ್ಟೆವು. ಅವರೊಂದು ಅಭಿಪ್ರಾಯವನ್ನೂ ಕೂಡ ಕೊಟ್ಟರು. ಅಲ್ಲಿ ಒಂದು ಕಮಿಟಿ ಆ ಕಮಿಟಿಯವರು ಮೆಜಾರಿಟಿ ಒಪಿನಿಯನ್ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದಾದ ಮೇಲೆ ಸಹ ಮುಖ್ಯ ನಾಯಾಧೀಶರು ಇಲ್ಲ. ಕೆಲವೊಂದು ಕಾರಣದಿಂದ ಇಲ್ಲಿ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಆಮೇಲೆ ಮತ್ತೆ ಮೀಟಿಂಗ್ ಕರೆದರು. ಮಾನ್ಯ ಚಂದ್ರೇಗೌಡರು ಆ ಭಾಗದ, ಉತ್ತರ ಕರ್ನಾಟಕದ ಭಾಗದ ಮೇಲೆ

ಬಾರ್ ಅಸೋಸಿಯೇಷನ್, ಹೈದರಾಬಾದ್ ಕರ್ನಾಟಕ ಇರಬಹುದು, ಈ ಕಡೆ ಉತ್ತರ ಕರ್ನಾಟಕ ಭಾಗದ ಎಲ್ಲಾ ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್ಸ್‌ರವರ ಒಂದು ಮೀಟಿಂಗ್ ಕರೆದರು. ಅಲ್ಲಿ ಒಂದು ಯುನಾನಿಮಸ್ ಡಿಸಿಷನ್ ಆಯಿತು. ಏನು ಡಿಸಿಷನ್ ಎಂದರೆ ಅದು ಸ್ಥಳ ಎಲ್ಲಿಯಾದರೂ ಆಗಲಿ, ಇವತ್ತು ಹುಬ್ಬಳ್ಳಿ-ಧಾರವಾಡ ಆಗಲಿ, ಗುಲ್ಬರ್ಗ ಆಗಲಿ, ಬಿಜಾಪುರ ಆಗಲಿ, ಬೆಳಗಾಂ ಆಗಲಿ, ಎಲ್ಲಿಯಾದರೂ ಆಗಲಿ. ಆ ವಿಚಾರವನ್ನು ಮುಖ್ಯ ನ್ಯಾಯಾಧೀಶರಿಗೆ ಬಿಡುತ್ತೇವೆ ಎನ್ನುವ ಬಗ್ಗೆ ಒಂದು ರೆಸಲ್ಯೂಷನ್ ಅಲ್ಲಿ ಆಯಿತು. ಆ ರೆಸಲ್ಯೂಷನ್ ಇನ್ನೂವರೆಗೆ ಮುಖ್ಯ ನ್ಯಾಯಧೀಶರಿಗೆ ಕಮ್ಯುನಿಕೇಟ್ ಆಗಲಿಲ್ಲ. ಇವತ್ತು ಕಾನೂನು ಸಚಿವರು ಇಲ್ಲಿ ಇದ್ದಾರೆ. ಆ ರೆಸಲ್ಯೂಷನ್ ಕಮ್ಯುನಿಕೇಟ್ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಲಿ. ಇನ್ನೂವರೆಗೆ ಅದು ಕಮ್ಯುನಿಕೇಟ್ ಆಗಲೇ ಇಲ್ಲ. ಮುಖ್ಯ ನ್ಯಾಯಾಧೀಶರಿಗೆ ಹೋಗಲಿಲ್ಲ. ಆ ರೆಸಲ್ಯೂಷನ್. ಆಮೇಲೆ ಮುಂದೆ ಡಿಸೆಂಬರ್ ತಿಂಗಳಲ್ಲಿ ಉತ್ತರ ಕರ್ನಾಟಕ ಭಾಗದ ಕೆಲವು ಅಡ್ವೋಕೇಟ್ಸ್ ಮತ್ತು ಬಾರ್ ಅಸೋಸಿಯೇಷನ್ಸ್‌ನವರು ಬಂದಿದ್ದರು. ಆವಾಗ ನಾವು ಇಲ್ಲಿ ಒಂದು ಮೆರವಣಿಗೆ ಮಾಡಿ ಸತ್ಯಾಗ್ರಹ ಮಾಡಿದೆವು. ನಾನೂ ಪಾರ್ಟಿಸಿಪೇಟ್ ಮಾಡಿದ್ದೆ. ಮಾನ್ಯ ಬಸವರಾಜ ಬೊಮ್ಮಾಯಿಯವರೂ ಇದ್ದರು, ಇನ್ನೂ ಹಲವಾರು ಶಾಸಕರು ಇದ್ದರು. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಕರೆಸಿದ್ದರು. ಡಿಸೆಂಬರ್ ತಿಂಗಳಲ್ಲಿ ಕರೆಸಿದ್ದರು. ಇಲ್ಲ, ಮುಖ್ಯ ನ್ಯಾಯಾಧೀಶರು ರಜೆಯ ಮೇಲೆ ಇದ್ದಾರೆ, ಎರಡು ಮೂರು ದಿವಸ ಬಿಟ್ಟು ಬರಬಹುದು. ಬಂದ ತಕ್ಷಣ ಅವರನ್ನು ಭೇಟಿಯಾಗಿ ಇದನ್ನು ಆದಷ್ಟು ಬೇಗನೆ ಮಾಡಬೇಕೆಂದು ಹೇಳುತ್ತೇನೆಂದರು. ಇನ್ನೂವರೆಗೂ ಮಾನ್ಯ ಮುಖ್ಯಮಂತ್ರಿಗಳು ಮುಖ್ಯನ್ಯಾಯಾಧೀಶರನ್ನು ಹೋಗಿ ಭೇಟಿ ಆಗಲಿಲ್ಲ. ಕಾನೂನು ಸಚಿವರು ಅವತ್ತೇನು ಯುನಾನಿಮಸ್ ರೆಸಲ್ಯೂಷನ್ ಆಗಿದೆ, ಅದನ್ನು ಕಮ್ಯುನಿಕೇಟ್ ಮಾಡಲಿಲ್ಲ. ಅಂದರೆ ರಾಜ್ಯ ಸರ್ಕಾರದ ಕಡೆಯಿಂದ ಯಾವುದೇ ಒಂದು ಇನಿಷಿಯೇಷನ್ ಆಗುತ್ತಿಲ್ಲ. ಎಲ್ಲಿ ಯಾವಾಗಲಾದರೂ ಹೋರಾಟ ಚಾಲು ಆಗುತ್ತದೋ ಯಾವಾಗ ಅದು ಹಿಂಸಾತ್ಮಕ ಚಳುವಳಿ ಪ್ರಾರಂಭ ಆಗುತ್ತದೋ ಆಗ ಇವರು ಕಣ್ಣು ತೆರೆಯುತ್ತಾರೆ. ಆವಾಗ ಆಲ್ ಪಾರ್ಟಿ ಮೀಟಿಂಗ್, ಮುಖ್ಯ ನ್ಯಾಯಾಧೀಶರನ್ನು ಭೇಟಿ ಆಗುವಂತಹದು, ಮತ್ತೆ ಎಲ್ಲಾ ಪ್ರೋಸೆಸ್ ಚಾಲು ಮಾಡುತ್ತಾರೆ. ಈಗ ಎಲ್ಲಾ ಶಾಂತವಾಗಿದೆ. ನಾರ್ಮಲ್ ಪಿರಿಯಡ್ ಇದೆ. ಕೋರ್ಟುಗಳ ಬಾಯ್‌ಕಾಟ್ ಏನೂ ಇಲ್ಲ. ಇಂತಹ ಸಮಯದಲ್ಲಿ ನೀವು ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಅದು ನಿಮ್ಮ ರಾಜ್ಯ ಸರ್ಕಾರದಿಂದ ಆಗುತ್ತಿಲ್ಲ. ಅಂದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಇವತ್ತು ಉತ್ತರ ಕರ್ನಾಟಕದ ಬಗ್ಗೆ, ನಿಮ್ಮ ಯಾವುದೇ ಒಂದು ನಿಲುವು ಸರಿಯಿಲ್ಲ ನೆಗ್ಲೆಕ್ಟ್ ಮಾಡುತ್ತಿದ್ದೀರಿ, ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎನ್ನುವಂತಹ ಮಾತನ್ನು ನಾನು ನೇರವಾಗಿ ಹೇಳಬಯಸುತ್ತಿದ್ದೇನೆ- ಇವೆಲ್ಲಾ ಕಾರಣದ ಮೇಲೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ಏನು ಮಾಡುತ್ತಿದೆ? ಇದರ ಬಗ್ಗೆ ನಿಮ್ಮ ನಿಲುವು ಏನು ಎನ್ನುವಂತಹದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಈ ವಿಷಯದಲ್ಲಿ ಮತ್ತೊಂದು ವಿಚಾರವನ್ನು ನಾನು ಹೇಳುವಂತಹದು, ಮಾನ್ಯ ಸಿಂಧ್ಯಾರವರು ಹೇಳಿದರು. ಇವತ್ತು ಕಂಟ್ರಾಕ್ಟರ್ಸ್ ಬಿಲ್ ಇದೆ ಎನ್ನುವಂತಹದನ್ನು ಹೇಳಿದರು. ಏನಾದರೂ ಬರೇ ಸರ್ಕಾರ ಹೇಳುತ್ತದೆ. ಇವತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವಿಚಾರ. 450 ಕೋಟಿ ರೂಪಾಯಿ ಬಾಕಿ ಇದೆ. ಒಂದು ಸಲ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ಸಂದರ್ಭದಲ್ಲಿ ಘೋಷಣೆ ಮಾಡಿ ಬಿಟ್ಟಿತು,

ಮೂಡ್ ಭಲೋ ಇತ್ತು ಎಂದು ಕಾಣುತ್ತದೆ. ನಾಳೆ ಇಲ್ಲ ನಾಡಿದ್ದು ನಾವು ರಿಲೀಸ್ ಮಾಡಿ ಬಿಡುತ್ತೇವೆಂದು ಹೇಳಿದರು. ಸಬ್ಸಿಡಿ ರಿಲೀಸ್ 450 ಕೋಟಿ ರೂಪಾಯಿ ಮಾಡುತ್ತೇವೆ ಎಂದು ಹೇಳಿದರು. ಪಾಪ, ಆ ಸಣ್ಣ ಕೈಗಾರಿಕೆಯ ಮಾಲೀಕರು ಯಾರು ಇದ್ದಾರೆ, ಅವರು ಖುಷಿ ಆದರು. ಏನೋ ಬದುಕಿದೆವು ಎಂದು ಖುಷಿ ಆದರು. ಇವತ್ತಿನವರೆಗೂ ಒಂದು ಪೈಸೆ ರಿಲೀಸ್ ಆಗಲಿಲ್ಲ. ಮತ್ತು ಈ ಕಂಟ್ರಾಕ್ಟರ್ಸ್ ಬಿಲ್. ನಿನ್ನೆ ಹೇಳಿದರು. ಯಾವಾಗ? ಡಿಸೆಂಬರ್ 6ನೇ ತಾರೀಖು ಪತ್ರಿಕೆಯಲ್ಲಿ ಬಂದಿದೆ. ಸಿವಿಲ್ ಗುತ್ತಿಗೆದಾರರ 340 ಕೋಟಿ ರೂ ಬಿಡುಗಡೆಗೆ ಆದೇಶ ಕೊಟ್ಟಿದ್ದೇವೆ ಎಂದು ಪತ್ರಿಕೆಯಲ್ಲಿ ಬಂತು. ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟು ಬಿಟ್ಟರು. ಆದರೆ ಒಂದು ಪೈಸೆ ರಿಲೀಸ್ ಇಲ್ಲ. ಆಮೇಲೆ ಇವತ್ತು ಏನಾಗಿದೆ ನಮ್ಮ ಆರ್ಥಿಕ ಪರಿಸ್ಥಿತಿ? ಇವತ್ತು 97–98ರಲ್ಲಿ ಸರ್ಕಾರದ ಒಟ್ಟು ಸಾಲದಲ್ಲಿ ಆಸ್ತಿಯ ಶೇಕಡ 2ಕ್ಕಿಂತ ಹೆಚ್ಚು ಸಾಲ ಇರಲಿಲ್ಲ. ಆದರೆ ಇವತ್ತು ಏನಾಗಿದೆ? ಏನಾಗಿದೆ ಎಂದರೆ ರಾಜ್ಯದ ಸಾಲದ ಒಂದು ಮೊತ್ತ ಏನು ಇದೆ ಶೇಕಡ 20ರ ಗಡಿ ದಾಟಿದೆ. 20ಕ್ಕಿಂತ ಜಾಸ್ತಿ ಇದೆ ಶೇಕಡ. ನಮ್ಮ ಪ್ರಾಪರ್ಟೀಸ್ ಏನು ಇದ್ದಾವೆ ಅಸೆಟ್ಸ್ ಅದಕ್ಕಿಂತ ಶೇಕಡ 20 ರಷ್ಟು ಜಾಸ್ತಿ ಆಗಿದೆ. ಅಂದರೆ ಇವತ್ತು 23 ಸಾವಿರ ಕೋಟಿರೂಯಷ್ಟು ಸಾಲ ನಮ್ಮ ರಾಜ್ಯದ್ದು ಇದೆ. ನಮ್ಮ ಈ ಒಂದು ಅಸೆಟ್ಸ್ ಇವನ್ನೆಲ್ಲಾ ಕನ್ಸಿಡರೇಷನ್ ಮಾಡಿದಾಗ ಇದು ಬಹಳ ಒಂದು ಸೀರಿಯಸ್ ಥಿಂಗ್, ಹೀಗಾಗಿ ಪರಿಸ್ಥಿತಿ ಏನಾಗುತ್ತದೆಂದರೆ ಯಾವುದಕ್ಕೂ ಹಣ ರಿಲೀಸ್ ಆಗುತ್ತಿಲ್ಲ. ಇವತ್ತು ಸಾಲನೂ ಜಾಸ್ತಿ ಆಯಿತು. ರೆವಿನ್ಯೂ ಕಲೆಕ್ಷನ್ ಇಲ್ಲ. ಹೀಗಾಗಿ ಇವತ್ತು ಏನಾಗಿದೆ ಎಂದರೆ ಕಂಟ್ರಾಕ್ಟರ್ಸ್ ಬಿಲ್‌ಗೆ ಪೇಮೆಂಟ್ ಇಲ್ಲ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಸಬ್ಸಿಡಿ ಇಲ್ಲ. 40 ಲಕ್ಷ ರೂಪಾಯಿ ಶಾಸಕರಿಗೆ ಅಭಿವೃದ್ಧಿ ಇಲ್ಲ. ಬರಗಾಲ ಕಾಮಗಾರಿಗೆ ನಿಮಗೆ ಹಣ ಇಲ್ಲ. ಇದು ಪರಿಸ್ಥಿತಿ. ಹೀಗಾಗಿ ಸರ್ಕಾರ ಇವತ್ತು ಕೈ ಎತ್ತಿ ನಿಲ್ಲುವಂತಹ ಪರಿಸ್ಥಿತಿಯ ನಿರ್ಮಾಣವಾಗಿದೆ. ಯಾವ ಪ್ಯಾಕೇಜ್‌ಗೂ ಹಣ ಕೊಡುತ್ತಾ ಇಲ್ಲ. ಹೀಗಾಗಿ ನಾನು ಕೊನೆಯದಾಗಿ ಇನ್ನೊಂದು ವಿಷಯಕ್ಕೆ ನಾನು ಬರುತ್ತಿದ್ದೇನೆ. ನಾನು ಮೊದಲೇ ಹೇಳಿದ್ದೇನೆ. ಬಹಳಷ್ಟು ವಿಷಯ ಇದೆ. ಆದರೆ ಅವನ್ನೆಲ್ಲಾ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಎಲ್ಲವನ್ನೂ ಮಾನ್ಯ ಆರಗ ಜ್ಞಾನೇಂದ್ರ ತೆಗೆದುಕೊಂಡು ಬಿಟ್ಟರು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈಗಾಗಲೇ ಕಳೆದ ಹಲವಾರು ದಿವಸಗಳಿಂದ ಭ್ರಷ್ಟಾಚಾರದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಏನಾಗಿದೆ ಅಂದರೆ ಭ್ರಷ್ಟಾಚಾರದ ವಿಷಯದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತು ನೀವು ಹೇಳಿದ್ದೀರಿ. ಒಂದು ಪ್ಯಾರಾದಲ್ಲಿ ಹೇಳಿದ್ದೀರಿ. ಏನೆಂದು ಹೇಳಿದ್ದೀರಿ ಎಂದರೆ, ಪ್ಯಾರಾ 131ರಲ್ಲಿ ಹೇಳಿದ್ದೀರಿ.

"ಭ್ರಷ್ಟಾಚಾರ ಮತ್ತು ಹಗರಣ ರಹಿತ ಆಡಳಿತವನ್ನು ಒದಗಿಸುವ ನಿಟ್ಟಿನಲ್ಲಿ ನನ್ನ ಸರ್ಕಾರವು ಸಾಕಷ್ಟು ಪ್ರಯತ್ನ ಮಾಡಿದೆಯೆಂದು ನಾನು ಸಂತೋಷದಿಂದ ನಿಮಗೆ ತಿಳಿಸಬಯಸುತ್ತೇನೆ" ಸರ್ಕಾರಕ್ಕೂ ಒಂದು ಹಾಸ್ಯ ಪ್ರಜ್ಞೆ ಇದೆ ಎಂದು ಹೇಳಿ ಈ ಸೆಂಟೆನ್ಸ್ ಮೇಲೆ ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಿದ್ದಾರೆ. "ಭ್ರಷ್ಟಾಚಾರ ಮತ್ತು ಹಗರಣ ರಹಿತ ಆಡಳಿತವನ್ನು ಒದಗಿಸುವ ನಿಟ್ಟಿನಲ್ಲಿ ನನ್ನ ಸರ್ಕಾರವು ಸಾಕಷ್ಟು ಪ್ರಯತ್ನ ಮಾಡಿದೆ." ಇದನ್ನು ಯಾವ ಉದ್ದೇಶದಿಂದ ಹೇಳಿದ್ದಿರೋ ಎಂಬುದು ನನಗೆ ಅರ್ಥ ಆಗುತ್ತಿಲ್ಲ. ರಾಜ್ಯಪಾಲರ ಭಾಷಣದ ಮುಖಾಂತರ ಸ್ಕ್ಯಾಮ್ ಫ್ರೀ ವಿಚಾರ ಹೇಳಿದ್ದೀರಿ. ಇವತ್ತೇನು ಇಡೀ ದೇಶವೇ ಚರ್ಚೆ ಮಾಡುತ್ತಿದೆ, ಏನು ಸ್ಕ್ಯಾಮ್ ನಡೆದಿದೆ

ಎನ್ನುವ ವಿಚಾರದ ಬಗ್ಗೆ ಇಡೀ ದೇಶವೇ ಚರ್ಚೆ ಮಾಡುತ್ತಿದೆ. ರಾಜ್ಯ ಅಷ್ಟೇ ಅಲ್ಲ. ಇಡೀ ರಾಷ್ಟ್ರವೇ ಚರ್ಚೆ ಮಾಡುತ್ತಿದೆ. ಮತ್ತು ನಾವು ಹಿಂದೆ ಹೇಳುತ್ತಿದ್ದೆವು. ಈ ತೆಲಗಿ ಹಗರಣ, ನಕಲಿ ಸ್ಟ್ಯಾಂಪ್ ಪೇಪರ್ ಹಗರಣ,

ಶ್ರೀ ಆರ್. ಧರ್ಮಸಿಂಗ್ : ಏನೂ ಆಗಿಲ್ಲ ಜನರ ಹತ್ತಿರ ತೆಗೆದುಕೊಂಡು ಹೋಗುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್ : ನಾವು ಇದನ್ನು ಜನರ ಬಳಿಯೂ ಒಯ್ಯುತ್ತೇವೆ. ಅದರಲ್ಲಿ ಏನೂ ಇಲ್ಲ ಅಂದರೂ ಒಬ್ಬರಿಗೆ ರಾಜೀನಾಮೆ ಕೊಟ್ಟು ಮೆಕ್ಕಾಗಿ ಕಳುಹಿಸಿದಿರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿಗೆ ಕರೆಸಬೇಕು ಎಂದು ಹೇಳಿ ಹೊರಗೆ ಹೋದವರು ನೀವು ಮಾತ್ರ ಬಂದಿರಿ, ಅವರ್ಯಾಕೆ ಬರಲಿಲ್ಲ?

ಶ್ರೀ ಜಗದೀಶ್ ಶೆಟ್ಟರ್ : ನಾವು ಹೊರಗೆ ಹೋದವರು ಮತ್ತೆ ಒಳಗೆ ಬಂದೆವು. ಅವರು ಪರ್ಮನೆಂಟಾಗಿ ಹೊರಗೆ ಹೋಗಿದ್ದಾರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಬಂದಿರಿ, ಅವರನ್ನು ಕರೆಸುವುದಕ್ಕೆ ಆಗಲಿಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ಅವರು ಪರ್ಮನೆಂಟಾಗಿ ಹೊರಗೆ ಹೋದ್ದಾರಲ್ಲಾ, ಅವರನ್ನು ನೀವು ಕರೆಸುವ ಲಕ್ಷಣವಿಲ್ಲವಲ್ಲಾ. ನಾವೇನು ಹೇಳಿದೆವು? ಮಂತ್ರಿಗಳು, ಪೋಲೀಸ್ ಅಧಿಕಾರಿಗಳು ಇದ್ದಾರೆಂದು ಹೇಳಿದೆವು. ಇವತ್ತು ಸಂಜೆ ಪತ್ರಿಕೆಯಲ್ಲಿ ಬಂದಿದೆ. ನಾಲ್ವರು ಪೋಲೀಸ್ ಅಧಿಕಾರಿಗಳ ಅಮಾನತ್ತಿಗೆ ಆಯುಕ್ತರ ಶಿಫಾರಸ್ ಎಂದು ಬಂದಿದೆ. ನಾವು ಹೇಳಿದಿರಿ ಕೇಳಲಿಲ್ಲ – ನೀವು ಈ ನಕಲಿ ಛಾಪಾ ಹಗರಣದಲ್ಲಿ ಪೋಲೀಸರು ಭಾಗಿ ಆಗಿದ್ದಾರೆ ಎಂದು ಆರೋಪ ಎದುರಿಸುತ್ತಿರುವ ನಾಲ್ವರು ಪೋಲೀಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸುವಂತೆ, ಇಲಾಖಾ ವಿಚಾರಣೆ ನಡೆಸುವಂತೆ ಪೋಲೀಸ್ ಆಯುಕ್ತ ಎಸ್. ಮರಿಸ್ವಾಮಿ ಅವರು ಪೋಲೀಸ್ ಮಹಾ ನಿರ್ದೇಶಕರಿಗೆ ಶಿಫಾರಸ್ಸು ಮಾಡಿದ್ದಾರೆ. ನಾಲ್ವರು ಪೋಲೀಸ್ ಆಫೀಸರ್ಸ್ ಇದ್ದಾರೆ, ಅವರ ಹೆಸರನ್ನು ನಾನು ಹೇಳುವುದಿಲ್ಲ. ಅವರ ಹೆಸರು ಪತ್ರಿಕೆಯಲ್ಲಿ ಇದೆ. ಅಂದರೆ ಯಾವಾಗಲೂ ಯಾರೂ ಇದರಲ್ಲಿ ಇಲ್ಲ ಎಂದು ಹೇಳಿದ್ದರಲ್ಲಾ, ಇವತ್ತು ನಾಲ್ಕು ಜನರ ಹೆಸರು ಬಂತಲ್ಲಾ. ಇನ್ನೂ ಬಹಳ ಜನ ಇದ್ದಾರೆ. ಅದು ಒಂದೊಂದೇ ಹೊರಗೆ ಬರುತ್ತದೆ ಅದಕ್ಕೆ ನಾನು ಏನು ಇವತ್ತು ಹೇಳಬಯಸುತ್ತಿದ್ದೇನೆಂದರೆ ಇದರ ಸಲುವಾಗಿ ನಾವು ಸರ್ಕಾರ ರಾಜೀನಾಮೆ ಕೊಟ್ಟು ಹೋಗಬೇಕೆಂದು ಹೇಳಿದವು. ಆದರೂ ಅದು ನಿಮಗೆ ಹತ್ತುವುದಿಲ್ಲ. ಹೀಗೇ ನಡೆಯುವುದು ಎಂದರೆ ನಡೆಯಲಿ. ಎಲೆಕ್ಷನ್‌ಗೆ ಹೋಗುತ್ತೇವೆ ಎಂದರೆ ಹೋಗಿ. ಜನ ಬುದ್ಧಿ ಕಲಿಸುತ್ತಾರೆ.

ಶ್ರೀ ಎ. ಕೃಷ್ಣಪ್ಪ : ಐದು ವರ್ಷದಿಂದ ಬುದ್ಧಿ ಕಲಿಸುತ್ತಿದ್ದಾರೆ ಬಿಡಿ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ನಾಯಕರೇ, ಐದು ವರ್ಷದಿಂದ ಆರು ಸುತ್ತು ಚುನಾವಣೆ ನಡೆಸಿದ್ದೇವೆ, ಬುದ್ಧಿ ಕಲಿಸುತ್ತಲೇ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಹಾಗೆ ಕಲಿಸುತ್ತಾರೆ. ಈ ಸಲ ನಿಮಗೆ ಕಲಿಸುತ್ತಾರೆ. ಒಂದು ಫೈನಲ್ ಆಗಿ ಕಲಿಸುತ್ತಾರೆ. ಒಂದು ಖಾಯಂ ಬುದ್ಧಿಯನ್ನೇ ಕಲಿಸುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಅದಕ್ಕಾಗಿಯೇ ನೀವು ಇಂತಹ ಹಗರಣವನ್ನು ಶಾಶ್ವತವಾಗಿ ಮಾಡುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಈ ಸಲ ಖಾಯಂ ಆದಂತಹ ಬುದ್ಧಿಯನ್ನೂ ಕಲಿಸುತ್ತಾರೆ.

ಶ್ರೀ ಎಂ. ಮಹದೇವ್ : ಐದು ವರ್ಷದಿಂದ 20 ಸಲ ಪೆಟ್ರೋಲ್ ಬೆಲೆ, ಡೀಸೆಲ್ ಬೆಲೆ ಏರಿಸಿದ್ದಿರಿ. ಈ ಸಾರಿ ಗ್ಯಾರಂಟಿ ನಿಮ್ಮನ್ನು ಮನೆಗೆ ಕಳುಹಿಸುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಸರ್ಕಾರದಲ್ಲಿ ಎಲ್ಲಾ ಆಗಿ ಹೋಗಿದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಎಲ್ಲಾ ಬೆಲೆಯನ್ನೂ ಇಳಿಸಿ ಬಿಟ್ಟಿದ್ದೀರಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮೂರು ರಾಜ್ಯದಲ್ಲಿ ಗೊತ್ತಾಗಿದೆಯಲ್ಲಾ.

ಅಧ್ಯಕ್ಷರು : ಬೇರೆ ಯಾರೂ ಮಾತನಾಡ ಬೇಡಿ. ಅವರು ಮುಗಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಹದೇವ್ : ಯಾವ ಸರ್ಕಾರ ಬಂದರೂ ಅಷ್ಟೇ.

ಶ್ರೀ ಜಗದೀಶ್ ಶೆಟ್ಟರ್ : ಮಧ್ಯ ಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ್‌ಗಳಲ್ಲಿ ಏನಾಗಿದೆ ಎಂದು ನಿಮಗೆ ಗೊತ್ತಾಗಿದೆಯಲ್ಲಾ. ಜನ ಯಾರ ಪರವಾಗಿದ್ದಾರೆ ಎಂದು ಗೊತ್ತಾಗಿದೆಯಲ್ಲಾ. ನಾಳೆ ಲೋಕಸಭಾ ಚುನಾವಣೆ ಬರಲಿ, ವಿಧಾನಸಭೆ ಚುನಾವಣೆ ಬರಲಿ, ಅದೇ ರಿಸಲ್ಟ್ ಬರುತ್ತದೆ. ನಾನು ಕೊನೆಯದಾಗಿ ಒಂದು ಅಂಶವನ್ನು ಇಲ್ಲಿ ಹೇಳಬಯಸುತ್ತಿದ್ದೇನೆ. ಇವತ್ತು ಸರ್ಕಾರದಲ್ಲಿ, ರಾಜ್ಯದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಯಾರ್‍ಯಾರು ಎಂಥೆಂಥ ಪ್ರಭಾವಿ ವ್ಯಕ್ತಿಗಳು ಏನೇನು ಎಂಥೆಂಥ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಇಲ್ಲಿ ವಿಚಾರ ಮಾಡಬೇಕಾಗಿದೆ. ಅಂದರೆ ಕಾನೂನು ಸುವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ? ಈಗಲೇ ಅದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ನಾನು ಹೇಳುವುದಿಲ್ಲ. ಬೆಳಿಗ್ಗೆ ದರೋಡೆ ಆಗಿದೆ. ಹಗಲು ದರೋಡೆ, ಖೂನಿ, ಅವೆಲ್ಲಾ ನಡೆಯುತ್ತಿದೆ. ಆದರೆ ಒಂದು ಏನೆಂದರೆ ಸ್ಮೂತಾಗಿ ಹೈಟೆಕ್ ಆಗಿದೆ. ನಮ್ಮ ರಾಜ್ಯದಲ್ಲಿ ಎಲ್ಲಾ ಹೈಟೆಕ್. ಹೈಟೆಕ್ ದರೋಡೆ ನಡೆಯುತ್ತಿದೆ. ರಾಜ್ಯದಲ್ಲಿ ಒಂದು ಸೆಕ್ಯುರಿಟಿ ಏಜೆನ್ಸಿ ಇದೆ. ಆ ಸೆಕ್ಯುರಿಟಿ ಏಜೆನ್ಸಿಯವರು ಏನು ಮಾಡಿದ್ದಾರೆ ಎಂದರೆ ಇವತ್ತೇನು ಸರ್ಕಾರದ ಸಾರ್ವಜನಿಕ ಉದ್ದಿಮೆಗಳು ಏನು ಇರುತ್ತವೆ, ಅದರಲ್ಲಿ ಪ್ರಾವಿಡೆಂಟ್ ಫಂಡ್ ಏನು ಇರುತ್ತವೆ ಆ ಪ್ರಾವಿಡೆಂಟ್ ಫಂಡ್‌ನಲ್ಲಿ ಕೋಟ್ಯಾಂತರ ರೂಪಾಯಿ ಜಮಾ ಆಗಿರುತ್ತವೆ. ನೌಕರುದಾರರ ಕೋಟ್ಯಾಂತರ ರೂಪಾಯಿ ಜಮೆ ಆಗಿರುತ್ತದೆ. ಆ ಸಾರ್ವಜನಿಕ ಉದ್ದಿಮೆಗಳಲ್ಲಿ, ಸಂಸ್ಥೆಗಳಲ್ಲಿದ್ದಂತಹ ನೌಕರುದಾರರ ಕೋಟ್ಯಾಂತರ ರೂಪಾಯಿ ಹಣ ಜಮೆ ಆಗಿರುತ್ತದೆ. ಆ ಜಮಾ ಆಗಿದ್ದನ್ನು ಇವತ್ತು ಗವರ್ನಮೆಂಟ್ ಆಫ್ ಇಂಡಿಯಾದ ಸೆಕ್ಯುರಿಟಿ ಬಾಂಡ್ಸ್ ಇರಬಹುದು, ಇನ್ನಿತರ ಶೇರ್ ಸರ್ಟಿಫಿಕೇಟ್ಸ್ ಇರಬಹುದು. ಅದರಲ್ಲಿ ಇನ್‌ವೆಸ್ಟ್ ಮಾಡುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಇನ್‌ವೆಸ್ಟ್‌ಮೆಂಟ್ ಮಾಡಿ ಅದರಿಂದ ಏನು ಲಾಭ ಬರುತ್ತದೆ ನಾಳೆ ಅದರಿಂದ ಕಾರ್ಮಿಕರಿಗೆ ಅನುಕೂಲ ಆಗುತ್ತದೆ. ಅದರಲ್ಲಿ ಇನ್‌ವೆಸ್ಟ್ ಮಾಡಿದ ಲಾಭ, ಬಡ್ಡಿ ಎಲ್ಲಾ ಅವರಿಗೆ ಬರುತ್ತದೆ. ಆದರೆ ನಾನು ಒಂದು ವಿಚಾರವನ್ನು ರೆಫರ್ ಮಾಡುತ್ತಿದ್ದೇನೆ. ಅದನ್ನು ತಮ್ಮ ಗಮನಕ್ಕೂ ಕಳುಹಿಸಿಕೊಡುತ್ತೇನೆ. ಏನು ಪೇಪರ್ಸ್ ಇದೆ. ಅದನ್ನು ತಮ್ಮ ಗಮನಕ್ಕೂ ಕಳುಹಿಸಿಕೊಡುತ್ತೇನೆ. ಇಲ್ಲಿ ಏನಾಗಿದೆ ಎಂದರೆ ಈ ಸಾರ್ವಜನಿಕ ಉದ್ದಿಮೆಗಳ ಇವತ್ತೇನು ಪ್ರಾವಿಡೆಂಟ್ ಫಂಡ್ ಹಣ ಇದೆಯಲ್ಲಾ ಅದನ್ನು ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯುರಿಟಿ ಬಾಂಡ್ಸ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ

ನೇರವಾಗಿ ಪ್ರಾವಿಜನ್ ಇದೆ. ಯಾವುದೇ ಒಂದು ಬ್ರೋಕರ್, ಯಾವುದೇ ಒಂದು ಏಜೆನ್ಸಿ ಮುಖಾಂತರ ಹೋಗಬೇಕೆಂದು ನಿಯಮ ಇಲ್ಲ. ಕಾನೂನು ಇಲ್ಲ. ಆದರೆ ನೇರವಾಗಿ ಇನ್‌ವೆಸ್ಟ್‌ಮೆಂಟ್ ಮಾಡಬಹುದು. ಥ್ರೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ನೇರವಾಗಿ ಇವತ್ತು ಇನ್‌ವೆಸ್ಟ್‌ಮೆಂಟ್ ಮಾಡಬಹುದು. ಆದರೆ ಅವೆಲ್ಲಾ ಕಾನೂನನ್ನು, ಅವೆಲ್ಲಾ ನಿಯಮಗಳನ್ನು ಮೀರಿ ಇವತ್ತು ಒಂದು ಸೆಕ್ಯುರಿಟಿ ಏಜೆನ್ಸಿಗೆ ಏಜೆನ್ಸಿ ಮುಖಾಂತರ ಇವತ್ತು ಅಲ್ಲಿ ಹಣವನ್ನು ತೊಡಗಿಸಿ, ಅವರ ಮುಖಾಂತರ ಇವತ್ತು ಗವರ್ನಮೆಂಟ್ ಆಫ್ ಇಂಡಿಯಾ ಬಾಂಡ್ಸ್‌ನಲ್ಲಿ ಮತ್ತು ಇನ್ನಿತರ ಕೆಲವು ಕಂಪನಿಗಳಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದನ್ನು ನಾವು ನೋಡುತ್ತೇವೆ. ಹಾಗಾಗಿ ಇವೊತ್ತು ಆ ಸೆಕ್ಯೂರಿಟಿ ಏಜೆನ್ಸಿಗೆ ಕೋಟ್ಯಂತರ ರೂಪಾಯಿಗಳಷ್ಟು ಲಾಭವಾಗಿದೆ. ಆದರೆ, ನೌಕರರ ಪಿ.ಎಫ್. ಫಂಡ್‌ಗೆ ಕೋಟ್ಯಂತರ ರೂಪಾಯಿ ಹಾನಿಯಾಗಿದೆ. ಅಷ್ಟು ಹಣ ಉಳಿದಿದ್ದರೆ ಅದನ್ನು ಅವರಿಗೆ ಕೊಡಬಹುದಿತ್ತು. ನೌಕರರ ಹಿತಾಸಕ್ತಿಗೆ ವಿರುದ್ಧವಾಗಿ ಹಾಗೂ ಆರ್‌ಬಿಐ ನಿಯಮಗಳಿಗೆ ವ್ಯತಿರಿಕ್ತವಾಗಿ, ನಿಯಮಗಳನ್ನೂ ಮೀರಿ ಸುಮಾರು 34 ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ಸೆಕ್ಯೂರಿಟಿ ಏಜೆನ್ಸಿ ಮುಖಾಂತರ ಇನ್‌ವೆಸ್ಟ್ ಮಾಡಿರುವುದರಿಂದ ನಷ್ಟವಾಗಿರುವ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ರಾಜ್ಯ ಸರ್ಕಾರ ಹಾಗೂ ಗೃಹ ಇಲಾಖೆಯ ಗಮನಕ್ಕೂ ಬಂದಿದೆ. ನಂತರ ಏನು ಮಾಡಿದರು? ರಾಜ್ಯ ಸರ್ಕಾರಕ್ಕೆ ಸಿಬಿಐ ಎಂದರೆ ಏಕೋ ಒಂದು ರೀತಿ ಅಲರ್ಜಿ!ಯಾವುದಕ್ಕೂ ಸಿಬಿಐ ಬೇಡವೆಂದು ಹೇಳುವವರು ಈ ಪ್ರಕರಣವನ್ನು ತನಿಖೆಗಾಗಿ ಸಿಬಿಐಗೆ ವಹಿಸಿಕೊಟ್ಟರು. ಅವರಿಗೆ ಏನು ಬುದ್ಧಿ ಬಂತೋ ಏನೋ, ಇದರಲ್ಲಿ ಹಣಕಾಸು ವಿಷಯವೂ ಒಳಗೊಂಡಿರುವುದರಿಂದ ಗಂಭೀರ ವಿಷಯವೆಂದರಿತು ತಕ್ಷಣವೇ ಸಿಬಿಐಗೆ ವಹಿಸಿದರು. ಇದನ್ನು ಸಿಬಿಐಗೆ ವಹಿಸಬೇಕೆಂದು ನಾವ್ಯಾರೂ ಕೇಳಲಿಲ್ಲ. ಆದರೂ ಸಿಬಿಐಗೆ ವಹಿಸಿದರು. ನಾವು ಬೇಡವೆಂದು ಹೇಳುವುದಿಲ್ಲ. ಅಲ್ಲಿಯೇ ಮುಂದುವರೆಸಿ. ಈಗ ಸಿಬಿಐನವರು ಸೆಕ್ಷನ್ 120(ಬಿ) read with 420 of IPC cheating and Section 13 sub clause (2) read with section 13 sub clause (1) sub clause (b). Prevention of Corruption Act ಪ್ರಕಾರ ಈಗಾಗಲೇ ಬೆಂಗಳೂರಿನ ವಿಶೇಷ ನ್ಯಾಯಾಲಯದಲ್ಲಿ ಎಫ್‌ಐಆರ್ ಫೈಲ್ ಆಗಿದ್ದು, ತನಿಖೆ ಜರುಗುತ್ತಿದೆ. ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇವೊತ್ತು ಇದರಲ್ಲಿ ಸಾರ್ವಜನಿಕ ಉದ್ದಿಮೆಯ ಅಧಿಕಾರಿಗಳೂ ಸಹ ಶಾಮೀಲಾಗಿದ್ದು, ಆ ಏಜೆನ್ಸಿಯ ಪ್ರಮುಖರಾದ ಚೇರ್ಮನ್‌ರವರೂ ಸಹ ಅವರೊಂದಿಗೆ ಶಾಮೀಲಾಗುವ ಮೂಲಕ political influence ಮಾಡಿ ಇವೊತ್ತು ಈ ರೀತಿ ನಿಯಮಬಾಹಿರವಾಗಿ ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿರುವುದನ್ನು ಕಾಣುತ್ತಿದ್ದೇವೆ. ಅದರ ಪ್ರಕಾರ ಇವೆಲ್ಲಾ ಅಂಶಗಳನ್ನೂ ಎಫ್‌ಐಆರ್‌ನಲ್ಲಿ ತಿಳಿಸಿದ್ದಾರೆ. ಅವೆಲ್ಲವನ್ನೂ ನಾನು ಓದುವುದಿಲ್ಲ. ತಮಗೆ ಅದರ ಕಾಪಿ ಕಳುಹಿಸಿಕೊಡುತ್ತಿದ್ದೇನೆ. ಎಫ್‌ಐಆರ್ ಪ್ರಕಾರ * * *

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ಕೇಸನ್ನು ಸಿಬಿಐಗೆ ವಹಿಸಿದ ನಂತರ ಆ ಕುರಿತು ಇಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ? ಸಿಬಿಐಗೆ ಏಕೆ ವಹಿಸಿದಿರಿ ಎಂದು ಕೇಳುವವರೂ ಇವರೇ. ಸಿಬಿಐಗೆ ವಹಿಸಿದರೆ ಮತ್ತೆ ಅದರಲ್ಲಿ ಅವರ ಹೆಸರಿದೆ, ಇವರ ಹೆಸರಿದೆ ಎಂದು ಹೇಳುವವರೂ ಇವರೇ.

*** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ಈ ಸಭೆಗೆ ಬಂದು ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅದೆಲ್ಲಾ ಏಕೆ ಹೇಳುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ : ನಾನು ರೆಫರ್ ಮಾತ್ರ ಮಾಡುತ್ತಿದ್ದೇನೆ.

ಅಧ್ಯಕ್ಷರು : ಇದರ ಬಗ್ಗೆ ನೀವು ನನಗೆ ಮೊದಲು ಕಳುಹಿಸಿಕೊಟ್ಟಿರಲಿಲ್ಲ. ನಿಯಮ 328ರ ಪ್ರಕಾರ ಮೊದಲು ಕಳುಹಿಸಿಕೊಡಬೇಕಿತ್ತು.

ಶ್ರೀ ಜಗದೀಶ್ ಶೆಟ್ಟರ್ : ನಾನು ಎಫ್ಐಆರ್ ಕಾಪಿ ಕಳುಹಿಸಿಕೊಟ್ಟಿದ್ದೇನೆ.

Mr. Speaker : No, No. I don't allow it.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅವರು ಯಾರ ಹೆಸರನ್ನೂ ಸಹ ಪ್ರಸ್ತಾಪಿಸಲಿಲ್ಲ. ಈ ಸದನದ ಸದಸ್ಯರ ಹೆಸರನ್ನು ಹೆಸರಿಸಿದ್ದರೆ, ಅಥವಾ ಯಾರಾದರೂ ಮಂತ್ರಿಗಳಾಗಿದ್ದಿದ್ದರೆ, ಅಥವಾ ಈ ಸದನಕ್ಕೆ ಬಾರದೆ ರಾಜ್ಯದ ಗೌರವಾನ್ವಿತ ಲೋಕಸಭಾ ಸದಸ್ಯರೋ, ರಾಜ್ಯಸಭಾ ಸದಸ್ಯರೋ ಆಗಿದ್ದರೆ, ಆಗ ಅವರ ಹೆಸರನ್ನು ಪ್ರಸ್ತಾಪಿಸಬೇಕಿದ್ದರೆ ನೋಟೀಸ್ ಕೊಡಬೇಕಾಗುತ್ತದೆ.. ತಮ್ಮ ಸರ್ಕಾರ ಪಾರದರ್ಶಕವಾಗಿರುವ ಸರ್ಕಾರ, ಭ್ರಷ್ಟಾಚಾರದ ವಿರುದ್ಧ ಹೋರಾಡಿದ್ದೇವೆಂದು ನಿಮಗೆ ನೀವೇ ಶಹಭಾಷ್‌ಗಿರಿ ತೆಗೆದುಕೊಂಡಿದ್ದೀರಿ, ನಿಮ್ಮ ಬೆನ್ನು ನೀವೇ ತಟ್ಟಿಕೊಂಡಿದ್ದೀರಿ. ಸುಮಾರು 38 ಕೋಟಿಗಳ ಪ್ರಾವಿಡೆಂಟ್ ಫಂಡ್ ಹಣ ಯಾವ ರೀತಿ ದುರುಪಯೋಗವಾಗಿದೆ ಎಂಬುದನ್ನು ಹೊರಗಡೆ ತರುತ್ತೇವೆಂದು ಹೇಳಿದರೆ ಅದಕ್ಕೇಕೆ ಅಡ್ಡಿಪಡಿಸಬೇಕು? ಅವರು ಮಾತನಾಡಲಿ.

ಅಧ್ಯಕ್ಷರು : ಅಡ್ಡಿಯಲ್ಲ. ಇಂತಹವರ ಮೇಲೆ, ವಿಷಯ ಪ್ರಸ್ತಾಪಿಸುವುದಾಗಿ ಹೇಳಿ ನಮಗೆ ಮೊದಲೇ ನೋಟೀಸ್ ಕಳುಹಿಸಿಕೊಡಬೇಕಾಗಿತ್ತು. ಅದೆಲ್ಲವನ್ನೂ ದಾಖಲೆಯಿಂದ ತೆಗೆದುಹಾಕಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದರಲ್ಲಿ ತಪ್ಪೇನಿದೆ? ಅವರು ಹೇಳಿರುವುದರಲ್ಲಿ unparliamentary word ಏನಿದೆ? There is no un Parliamentary word.

ಅಧ್ಯಕ್ಷರು : ಅವರು ಹೇಳಿದರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಏನು ಹೇಳಿದರು? ಅದನ್ನಾಕೆ ದಾಖಲೆಯಿಂದ ಹೊರಗಡೆ ತೆಗೆಸುತ್ತಿದ್ದೀರಿ? No. this cannot be tolerated ಅಂದರೆ, ಅದು ಯಾರನ್ನೋ ಮುಚ್ಚಿಡುವ ಪ್ರಯತ್ನ ಮಾಡುತ್ತಿದ್ದೀರೆಂಬುದರ ಅರ್ಥವೇನು?

Mr. Speaker : ಏನೂ ಇಲ್ಲ. I am very sorry.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮತ್ತೆ ರೆಕಾರ್ಡ್‌ನಿಂದ ಏಕೆ ತೆಗೆಸಿ ಹಾಕುತ್ತಿದ್ದೀರಿ?

Mr. Speaker : ನಮ್ಮ ರೂಲ್ಸ್ ಪ್ರಕಾರ ಬೆಳಿಗ್ಗೆಯೇ ಆ ಕುರಿತು ಅವರು ನಮಗೆ ನೋಟೀಸ್ ಕಳುಹಿಸಿಕೊಡಬೇಕಾಗಿತ್ತು. He never sent it. ಅವರು ನಮಗೆ ಕಳುಹಿಸಿಕೊಡಲಿಲ್ಲವಲ್ಲಾ.

Sri P.G.R.Sindhya : It cannot happen like that.

ಅಧ್ಯಕ್ಷರು : ತಾವು ದಯವಿಟ್ಟು ನಿಯಮ 328ಅನ್ನು ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ಆ ಬಗ್ಗೆ ರೆಫರ್ ಸಹ ಮಾಡಬಾರದೇ?

ಅಧ್ಯಕ್ಷರು : ಪ್ರಕರಣದ ತನಿಖೆಗಾಗಿ ಸಿಬಿಐಗೆ ವಹಿಸಿಕೊಟ್ಟ ನಂತರ ಮತ್ತೇಕೆ ಆ ಕುರಿತು ಮಾತನಾಡುತ್ತೀರಿ?

Sri B. Somasekhar : This is only tip of the iceberg. ಇಷ್ಟಕ್ಕೆ ನೀವು ಕೋಪಿಸಿಕೊಂಡರೆ ಹೇಗೆ? ಸರ್ಕಾರ ಏನು ಹೇಳಿದೆ ಮತ್ತು ಅದಕ್ಕೆ ವಿರುದ್ಧವಾಗಿ ನೀವು(ಸರ್ಕಾರ) ಏನು ಮಾಡಿದ್ದೀರೆಂಬುದನ್ನು ಅವರು ಹೇಳುತ್ತಿದ್ದಾರಷ್ಟೆ. ನೀವು ಹೇಳಿಕೊಂಡಿರುವುದಕ್ಕೂ ನಡೆದುಕೊಂಡಿರುವುದಕ್ಕೂ ಆಗಿರುವ ವ್ಯತ್ಯಾಸದ ಉದಾಹರಣೆಗಳನ್ನು ಕೊಡುತ್ತಿದ್ದಾರೆ. ಅದರಲ್ಲೇನಿದೆ? ನಾವು ಹಗರಣವನ್ನು ಹೊರಗಡೆ ತೆಗೆಯಬಾರದೇ?

ಅಧ್ಯಕ್ಷರು : ಸಿಬಿಐ ಮುಂದೆ ತನಿಖೆಯಲ್ಲಿರುವಾಗ ತಾವು ಇಲ್ಲೇಕೆ ಮಾತನಾಡುತ್ತೀರಿ? They are investigating. ಹಾಗೇನಾದರು ಇದ್ದರೆ ಅವರು ನೋಟೀಸ್ ಕಳುಹಿಸಿಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಸಿಬಿಐ ಮುಂದಿರುವುದನ್ನು ನಾವು ಚರ್ಚೆ ಮಾಡುತ್ತಿಲ್ಲ.

ಅಧ್ಯಕ್ಷರು : ಮತ್ತೇನು ಮಾಡುತ್ತಿದ್ದೀರಿ?

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ರೆಫರ್ ಮಾಡುತ್ತಿದ್ದಾರೆ. ರೆಫರ್ ಕೂಡ ಮಾಡಬಾರದೆಂದರೆ ಹೇಗೆ?

ಅಧ್ಯಕ್ಷರು : ರೆಫರ್ ಅಲ್ಲ. We can't discuss. Any judicial authority , quasi-Judicial authority ಮುಂದಿರುವುದನ್ನು discuss ಮಾಡಬಾರದೆಂದಿದೆ. It amounts to sub-judice.

ಶ್ರೀ ಎಸ್. ಸುರೇಶ್‌ಕುಮಾರ್ : ಅವರು referrence ಮಾಡುತ್ತಿದ್ದಾರಷ್ಟೆ. Discuss ಮಾಡುತ್ತಿಲ್ಲ.

Mr. Speaker : No. It will amount to sub-judice.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಫ್‌ಐಆರ್ ಪಬ್ಲಿಕ್ ಡಾಕ್ಯುಮೆಂಟ್ ಆಗಿದ್ದು, ಯಾರು ಬೇಕಾದರೂ ಕೋರ್ಟ್ ಸ್ಟಾಂಪ್ ಫೀ ಕಟ್ಟಿದರೆ ಅದನ್ನು ಕೊಡುತ್ತಾರೆ. ಅದನ್ನು ಅವರು ರೆಫರ್ ಮಾಡುತ್ತಿದ್ದಾರೆ. ಹೇಳಲಿ ಬಿಡಿ. ಅದನ್ಯಾಕೆ ನೀವು ಕಡತದಿಂದ ತೆಗೆಸುತ್ತೀರಿ?

ಅಧ್ಯಕ್ಷರು : ಸಬ್‌ಜ್ಯೂಡೀಸ್ ಆಗುವುದನ್ನು ನೀವು ಮಾತನಾಡಬೇಡಿ, ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಯಾವುದು ಸಬ್‌ಜ್ಯುಡೀಸ್ ಬರುವುದಿಲ್ಲ. I am referring only. ಎಫ್‌ಐಆರ್ ಕಾಪಿ, ಇದೊಂದು ಸಾರ್ವಜನಿಕ ಕಾಗದ ಪತ್ರವಾಗಿದೆ. ಇದನ್ನು ನಾನು ರೆಫರ್ ಮಾಡುತ್ತಿದ್ದೇನೆ. ಆ ಕಾಪಿಯನ್ನು ಇವೊತ್ತು ತಮ್ಮ ಮುಂದೆ ಸಬ್‌ಮಿಟ್ ಮಾಡುತ್ತಿದ್ದೇನೆ. ಇದರಲ್ಲಿ ಯಾರ್‍ಯಾರು ಆರೋಪಿಗಳಿದ್ದಾರೆಂಬುದನ್ನು ತಾವು ಕನ್ಸಿಡರ್ ಮಾಡಿ, ನೋಡಿ.

ಅಧ್ಯಕ್ಷರು : ಈಗ ಮುಂದಿನ ಪಾಯಿಂಟ್‌ಗೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್ : ಇವೊತ್ತು ಇದರಲ್ಲಿ ನನ್ನ contention ಏನಿದೆಯೆಂದರೆ, ಈ ರೀತಿಯ financial hi-tech ದರೋಡೆಯ ಅವ್ಯವಹಾರಗಳೇನಿವೆ, ನಾನು hi-tech ದರೋಡೆ ಎಂಬ ಪದಗಳನ್ನು ಏಕೆ ಉಪಯೋಗಿಸಿದೆನೆಂದರೆ, ಯಾರು ರಾಜಕೀಯ ಪ್ರಭಾವವುಳ್ಳ

ಪ್ರಮುಖ ವ್ಯಕ್ತಿಗಳಿದ್ದಾರೆ, ಅವರ ಸಂಬಂಧಿಕರೇನಿದ್ದಾರೆ, ಅವರು ತಮ್ಮ ರಾಜಕೀಯ ಪ್ರಭಾವ ಉಪಯೋಗ್ಗಿಸಿ ಈ ರೀತಿ ಇನ್‌ವೆಸ್ಟ್‌ಮೆಂಟ್ ಮಾಡುವ ಮೂಲಕ hi-tech ದರೋಡೆ ನಡೆಯುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದಕ್ಕೋಸ್ಕರ, ಇದನ್ನು ರೆಫರ್ ಮಾಡಿದ್ದೇನೆ. ಆದ್ದರಿಂದ ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಹೊರಗೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನೀವು ಎಷ್ಟೆಷ್ಟು ತಪ್ಪು ಮಾಡುತ್ತಿದ್ದೀರಿ, ಹಗರಣ ಮಾಡುತ್ತಿದ್ದೀರೆಂಬುದನ್ನು ನಾವೆಲ್ಲಾ ಕೇಳುವವರು, ನೋಡುವವರಾಗಿದ್ದೇವೆ. ಏಕೆಂದರೆ, ಇವೊತ್ತು ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡುತ್ತಾ, ತಮ್ಮ ರಾಜಕೀಯ ಜೀವನದಲ್ಲಿಯೇ ಇಷ್ಟೊಂದು ಭ್ರಷ್ಟ ಸರ್ಕಾರ ನಾನು ನೋಡಿಲ್ಲವೆಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿರುವುದೇನೆಂದರೆ, ಇದರಲ್ಲಿ ಮುಖ್ಯಮಂತ್ರಿಗಳ ಸಂಬಂಧಿಕರು ಇರುವುದರಿಂದ ಮತ್ತು ಆ ಕುರಿತು ಅವರುಗಳ ಮೇಲೆ ಸಿಬಿಯ ಕೇಸ್ ಫೈಲ್ ಆಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ನೈತಿಕ ಹೊಣೆ ಹೊರುವ ಮೂಲಕ ರಾಜೀನಾಮೆ ನೀಡಿ ಹೊರಗೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಈ ರೀತಿಯ ಭ್ರಷ್ಟ ಸರ್ಕಾರ ಹೋಗಬೇಕು. ಯಾವುದೇ ಸರಿಯಾದ ಮಾಹಿತಿಗಳಿಲ್ಲದೆ ರಾಜ್ಯಪಾಲರ ಮುಖಾಂತರ ಸತ್ಯಕ್ಕೆ ದೂರವಾದ ಘೋಷಣೆಗಳನ್ನು ಹೇಳಿಸಿ ಜನರನ್ನು ಮರುಳು ಮಾಡುವಂಥ ಕೆಲಸ ಮಾಡುತ್ತಿದ್ದಾರೆಂದು ಹೇಳಿ, ಸರ್ಕಾರ ಇದರ ಬಗ್ಗೆ ಸೂಕ್ತ ಪ್ರತಿಕ್ರಿಯೆ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ನನಗೆ ಪ್ರಸ್ತಾಪಿಸಲು ಇನ್ನು ಸಾಕಷ್ಟು ವಿಷಯಗಳಿದ್ದರೂ ಹೆಚ್ಚಿಗೆ ಮಾತನಾಡುವುದಿಲ್ಲ. ಆದರೂ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ. ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ಮಾನ್ಯ ಅಧ್ಯಕ್ಷರಾದ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಸ್ಪಷ್ಟೀಕರಣ ನೀಡಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಪದೇ ಪದೇ ಸಿಬಿಐ ಕುರಿತು ಪ್ರಸ್ತಾಪಿಸಿದರು. ಭಾರತ ಸರ್ಕಾರ ಯಾವುದೇ ಕೇಸ್‌ಗಳಿರಲಿ, ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕೇಸ್‌ಗಳಿರಲಿ, ಅಧಿಕಾರಿಗಳ ಕೇಸ್‌ಗಳಿರಲಿ ಅಥವಾ ರಾಷ್ಟ್ರೀಕೃತ ಬ್ಯಾಂಕುಗಳ ಕೇಸ್‌ಗಳಿರಲಿ, ಇದ್ಯಾವುದನ್ನು ಕೂಡ ರಾಜ್ಯ ಸರ್ಕಾರ ತಡೆಹಿಡಿಯುವುದಿಲ್ಲ. ಯಾವಾಗ ಅವರು ರೆಫರ್ ಮಾಡುತ್ತಾರೋ, 24 ಗಂಟೆಯೊಳಗೆ ನಾನು ಇಲ್ಲೇ ಇದ್ದರೆ, ತಕ್ಷಣವೇ consent ಕೊಡುತ್ತೇನೆ. ಇಲ್ಲವೇ ಊರಿನಲ್ಲಿ ಪ್ರವಾಸದಲ್ಲಿದ್ದರೆ, ಬಂದ ತಕ್ಷಣ consent ಕೊಡುತ್ತೇವೆ. ನಾನು ಹೇಳುವುದೇನೆಂದರೆ, ಪ್ರತಿ ತಿಂಗಳೂ ಹೆಚ್ಚು-ಕಡಿಮೆ 30-40-50 ಕೇಸ್‌ಗಳು ಸಿಬಿಐಗೆ ರೆಫರ್ ಆಗುತ್ತದೆ. ಅವರು ಒಂದು ಕಲ್ಪನೆ ಏನು ಕೊಡುತ್ತಿದ್ದಾರೆಂದರೆ, ಇವರು (ರಾಜ್ಯ ಸರ್ಕಾರ) ಸಿಬಿಐಗೆ ಯಾವುದೇ ಕೇಸ್‌ಗಳನ್ನೂ ರೆಫರ್ ಮಾಡುವುದಿಲ್ಲವೆನ್ನುವ ಅಭಿಪ್ರಾಯ ಮೂಡಿಸುತ್ತಿದ್ದಾರೆ. ಅದು ತಪ್ಪು. ನಾವು ಪ್ರತಿ ತಿಂಗಳೂ ಅನೇಕ ಕೇಸ್‌ಗಳನ್ನು ಸಿಬಿಐಗೆ ರೆಫರ್ ಮಾಡುತ್ತೇವಲ್ಲದೆ ಪ್ರತಿದಿನವೂ ರೆಫರ್ ಮಾಡುತ್ತೇವೆ. ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳೇನಾದರೂ ಇದ್ದಲ್ಲಿ ಅದರ ಬಗ್ಗೆ ತನಿಖೆ ನಡೆಯುತ್ತಿದ್ದರೆ, ಅಂತಹ ವಿಷಯಗಳಿಗೆ consent ಕೊಡಬೇಕೆಂಬ ಒತ್ತಾಯವೇನೂ ಇಲ್ಲ. ಕಾನೂನಿನಲ್ಲೂ ಕೂಡ ಆ ರೀತಿ ಇರುವುದಿಲ್ಲ.

7.20 ಪಿಎಂ

ಇಲ್ಲದಿದ್ದರೆ ಕಾನೂನನ್ನು ಅವರೇ ಬದಲಾವಣೆ ಮಾಡಿಕೊಳ್ಳುತ್ತಿದ್ದರು. ತಿದ್ದುಪಡಿ ಮಾಡಿಕೊಳ್ಳುತ್ತಿದ್ದರು. ಯಾವುದೇ ಒಂದು ಕಂಪ್ಲೆಂಟ್ ಬಂದ ತಕ್ಷಣ ಸಿಬಿಐ suo moto ಎಂಟರ್ ಆಗುತ್ತಿತ್ತು. ಅವರು ನಮಗೆ option ಕೊಟ್ಟ ಉದ್ದೇಶವೇನೆಂದರೆ, case by case ನೀವು ನೋಡಿ consent ಕೊಡಬೇಕೆಂಬ ದೃಷ್ಟಿಯಿಂದ ಇದು ಇರತಕ್ಕ ಕಾನೂನು Delhi Police Act, ಅದನ್ನು suo moto ಕೊಡತಕ್ಕದಲ್ಲ. ಅದಕ್ಕೆ ನಾವು every consent ಕೊಡುತ್ತಲೇ ಇದ್ದೇವೆ. ಯಾವುದೂ ಕೂಡ ನಿಲ್ಲಿಸತಕ್ಕದ್ದು ಇಲ್ಲ. ಇದೊಂದೇ ಕೇಸ್‌ನಲ್ಲಿ ಕೊಟ್ಟಿದ್ದೇವೆ ಎಂದಲ್ಲ Public undertaking ಇರುವುದರಿಂದ ಆ case ಅನ್ನು ಸಿಬಿಐಗೆ ರೆಫರ್ ಮಾಡಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಒಂದೇ ಒಂದು ವಿಚಾರ.

Mr. Speaker : No, I cannot allow. ಬೇಕಾಗಿಲ್ಲ. ಮಾನ್ಯ ಚಂದ್ರೇಗೌಡರೆ, ತಾವು ಹೇಳಿ. No. I am very sorry. ಮಾನ್ಯ ಚಂದ್ರೇಗೌಡರೆ ತಾವು ಪ್ರಾರಂಭ ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಒಬ್ಬರು ಐಎಎಸ್ ಮತ್ತು ಐಪಿಎಸ್ ಆಫೀಸರ್ ಮೇಲೆ ದೊಡ್ಡ allegation ಆಯಿತು. ಅದನ್ನು ಇದುವರೆಗೆ ಏಕೆ ಸಿಬಿಐಗೆ ಕೊಟ್ಟಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಿಬಿಐ ಗೆ ಕೊಡಬೇಕೋ ಬೇಡವೋ ಎಂಬ ಬಗ್ಗೆ ಸರ್ಕಾರ ಯೋಚನೆ ಮಾಡಿ ಅದಕ್ಕೆ ಇರುವ ಸಾಧಕಬಾಧಕಗಳನ್ನು ನೋಡಿ ಕೊಡಬಹುದು. ನೀವು ಕೊಡು ಎನ್ನುವುದನ್ನು ಕೊಡುವುದು, ಬಿಡಿ ಎನ್ನುವುದನ್ನು ಬಿಡುವುದಲ್ಲ. ನೀವು ಬೇಕಾದವರಿಗೆ ಅಲಿಗೇಷನ್ ಮಾಡುತ್ತೀರಿ, ಕೊಡು ಅನ್ನುವುದು Yes. If we have got evidence, we will do it. Otherwise, if we are convinced that a particular officer is not involved we will not give our duty to defend any officer who is not in doubt.

ಶ್ರೀ ಜಗದೀಶ್‌ಶೆಟ್ಟರ್ : ನೀವು ಸಿಬಿಐ ಗೆ ಕೊಟ್ಟಿದ್ದನ್ನು ನಾವು question ಮಾಡಿಲ್ಲ. ಕೊಟ್ಟು ಒಳ್ಳೆಯದನ್ನು ಮಾಡಿದ್ದೀರೆಂದು ಹೇಳಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಏನೆಂದು ಹೇಳಿದ್ದಾರೆಂದರೆ, ಈ ಕೇಸನ್ನು ಏನು ರೆಫರ್ ಮಾಡಿದರು, ಇದನ್ನು ಸಿಬಿಐ ಗೆ ತೆಗೆದುಕೊಳ್ಳುತ್ತೇವೆಂದು ಅವರು ಪಾರ್ಲಿಮೆಂಟ್‌ನಲ್ಲೇ ಹೇಳಿದರು. ಹಾಗಿದ್ದರೆ ತೆಗೆದುಕೊಳ್ಳಲಿ.

9) ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸೂಚಿಸುವ ಚರ್ಚೆಗೆ ಸರ್ಕಾರದಿಂದ ಉತ್ತರ :-

† **ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :** ಮಾನ್ಯ ಸಭಾಧ್ಯಕ್ಷರೆ, ರಾಜ್ಯ ವಿಧಾನ ಮಂಡಳದಲ್ಲಿ ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ವಂದನಾ ನಿರ್ಣಯದ ಮೇಲೆ ಸುಮಾರು 15 ಜನ ಸದಸ್ಯರುಗಳು ತಮ್ಮ ಅಮೂಲ್ಯವಾದಂಥ ಅಭಿಪ್ರಾಯಗಳನ್ನು, ಸಲಹೆಗಳನ್ನು ಸೂಚನೆಗಳನ್ನು, ಮಾರ್ಗದರ್ಶನವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಚರ್ಚೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳೆಲ್ಲವೂ ತುಂಬಾ ಉಪಯುಕ್ತವೂ ಚರ್ಚೆ ಬಹಳ ಗಂಭೀರವಾಗಿ ನಡೆದಿದೆ. ಬಹಳ ಸಂತೋಷದ ಮೊದಲ ವಿಚಾರವೇನೆಂದರೆ, ಶಾಸನಸಭೆ ನಡೆಯುವ